ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ ೩೦ನೇ ಮೇ ೧೯೮೮, ಜೇಷ್ಠ ೯, ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಆರ್. ಯಾವಗಲ್) ಅವರು ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆಗಳು

ಮಾನ್ಯ ಸದಸ್ಯರಾದ ಡಾ. ಬಿ. ನಾರಾಯಣಸ್ವಾಮಿ ಮಂತ್ರಿ ಮಾಜಿ ಸಚಿವ ಶ್ರೀ ಬಿ. ಎಲ್. ಗೌಡರ ನಿಧನದ ಬಗ್ಗೆ

ಉಪಾಧ್ಯಕ್ಷರು.— ವಿಧಾನಸಭಾ ಸದಸ್ಯರಾದ ಡಾ. ಬಿ. ನಾರಾಯಣಸ್ವಾಮಿ ಅವರು ನಿಧನರಾದ ಬಗ್ಗೆ ಸಂತಾಪಸೂಚಿಸುವ ದುಃಖಕರ ಕೆಲಸವನ್ನು ಈಗ ನಾನು ಪ್ರಸ್ತಾಪಿಸಬೇಕಾಗಿದೆ.

ಡಾ. ಬಿ. ನಾರಾಯಣಸ್ವಾಮಿ ಅವರು ೧೯೮೮ನೆಯ ಇಸವಿ ಮೇ ೨೮ರಂದು ಬೆಳಿಗ್ಗೆ ಬೆಂಗಳೂರಿನಲ್ಲಿ ನಿಧನರಾದರು.

ಶ್ರೀಯುತರು ವೃತ್ತಿಯಲ್ಲಿ ವೈದ್ಯರಾಗಿದ್ದು ಬಾಲ್ಯದಿಂದಲೂ ಸಾರ್ವಜನಿಕರ ಸೇವೆಯ ಬಗ್ಗೆ ಕಾಳಜಿ ವಹಿಸಿದ್ದರು. ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ ಪ್ರಧಾನ ಕಾರ್ಯದರ್ಶಿಯಾಗಿ, ಸೇವಾದಳದ ಕಾರ್ಯದರ್ಶಿಯಾಗಿ, ಹೀಗೆ ವಿವಿಧ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡಿರುತ್ತಾರೆ. ಶ್ರೀಯುತರು ಎಂಟನೆಯ ವಿಧಾನ ಸಭೆಗೆ ಬಾಗೇಪಲ್ಲಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಶ್ರೀಯುತರು ಹಲವಾರು ಸಂಘ ಸಂಸ್ಥೆಗಳಲ್ಲಿ ಬಹುವಿಧವಾಗಿ ಸೇವೆಯನ್ನು ಸಲ್ಲಿಸಿದ್ದರು.

ಹಾಗೆಯೇ ಮಾಜಿ ಶಾಸಕ ಮತ್ತು ಮಂತ್ರಿಯಾಗಿದ್ದ ಶ್ರೀ ಬಿ. ಎಲ್. ಗೌಡರವರು ದಿನಾಂಕ ೨೮ನೇ ಮೇ, ೧೯೮೮ ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ವೃತ್ತಿಯಲ್ಲಿ ವ್ಯವಸಾಯಗಾರರಾಗಿದ್ದ ಶ್ರೀಯುತರು ಚಿತ್ರದುರ್ಗ ತಾಲ್ಲೂಕಿನಲ್ಲಿ ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಅವರು ಎರಡು, ಮೂರು, ಬಾರಿ ಹಾಗೂ ಎಂಟನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಸಹಕಾರ ಉಪ ಮಂತ್ರಿ ಹಾಗೂ ಕೃಷಿ ಮಂತ್ರಿಯಾಗಿದ್ದರು. ೧೯೮೫ನೇ ಇಸವಿಯಿಂದ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದರು.

ಅವರ ನಿಧನಕ್ಕೆ ಸಂತಾಪ ಸೂಚಿಸಲು ಸದನವು ನನ್ನೊಂದಿಗೆ ಪಾಲ್ಗೊಳ್ಳುವುದೆಂದು ನಾನು ಭಾವಿಸಿದ್ದೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).— ಸನ್ಮಾನ್ಯ ಅಧ್ಯಕ್ಷರೇ, ಡಾ. ಬಿ ನಾರಾಯಣ ಸ್ವಾಮಿ ಅವರು ಬಾಗೇಪಲ್ಲಿ ಕ್ಷೇತ್ರದಿಂದ ೧೯೮೫ರಲ್ಲಿ ಈ ಸಭೆಗೆ ಶಾಸಕರಾಗಿ ಚುನಾಯಿತರಾಗಿದ್ದರು. ಅವರು ಸಜ್ಜನರು ಮತ್ತು ಒಳ್ಳೆಯ ಸ್ವಭಾವದವರಾಗಿದ್ದರು. ತಾವು ಸಹ ಅವರನ್ನು ನೋಡಿದ್ದೀರಿ. ನಮ್ಮಲ್ಲಿ ಅನೇಕ ಮಾನ್ಯ ಸದಸ್ಯರಿಗೆ ಅವರು ಆಚ್ಚುಮೆಚ್ಚಿನ ವ್ಯಕ್ತಿಯಾಗಿ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದ್ದರು. ಆದರೆ ಅವರು ಇವೊತ್ತು ನಮ್ಮ ಜೊತೆ ಇಲ್ಲ. ಪೊನ್ನೆಯ ದಿನ ಅವರು ಈ ಸದನದಲ್ಲಿ ಅಡ್ಡಾಡುತ್ತಿದ್ದರು. ಅದೇದಿನ ಅವರು ಸಾಯಂಕಾಲ ಅವರು ಶಾಸಕರ ಭವನಕ್ಕೆ ಹೋಗಿ ಶ್ರೀ ಜಮು ಖಂಡಿ ಹಾಗೂ ಇನ್ನೂ ಅನೇಕ ಮಾನ್ಯ ಸದ್ಯಸರಿಗೆ ಫೋನ್ ಮಾಡಿ ಎಸ್. ಸಿ. ಮತ್ತು ಎಸ್. ಟಿ. ಸಮಿತಿಯು ತಮ್ಮ ಕ್ಷೇತ್ರಕ್ಕೆ ಶನಿವಾರ ದಿವಸ ಭೇಟಿ ನೀಡುತ್ತಿರುವುದರಿಂದ ತಾವುಗಳು ಅಲ್ಲಿಗೆ ಬಂದು ಅಲ್ಲಿನ ಎಸ್. ಸಿ. ಮತ್ತು ಎಸ್. ಟಿ. ಜನರ ಮೇಲೆ ನಡೆದಂಥ ಅನ್ಯಾಯಗಳ ಬಗ್ಗೆ ಕಣ್ಣಾರೆ ನೋಡ ಬೇಕೆಂದು ಮನವಿ ಮಾಡಿಕೊಂಡಿದ್ದರು. ಅವರು ಮಾನ್ಯ ವೆಂಕಟರಾಮಯ್ಯನವರ ಜೊತೆ ಸಹ ಮಾತನಾಡಿದ್ದರು. ಅವರು ನಿಧನರಾದ ವಿಷಯ ನನಗೆ ತಿಳಿದ ಕೂಡಲೇ ನಾನು ಮೂರು ಗುಟಿಯ ಸಮಯದಲ್ಲಿ ಶಾಸಕರ ಭವನಕ್ಕೆ ಹೋಗಿದ್ದೆ. ಆಗ ಅಲ್ಲಿ ಮಾನ್ಯ ವೆಂಕಟರಾಮಯ್ಯನವರು, ಶ್ರೀ ಮಲ್ಲಾರಿಗೌಡ ಪಾಟೀಲ್ ಹಾಗೂ ಇನ್ನೂ ಅನೇಕ ಮಾನ್ಯ ಸದಸ್ಯರಿಗಳು ಇದ್ದರು. ಈ ವಿಷಯ ಕೇಳಿದ ನಂತರ ನನ್ನ ಮನಸ್ಸಿಗೆ ಬಹಳ ಆಘಾತ ಉಂಟು ಮಾಡಿದೆ. ಏಕೆಂದರೆ, ಅವರು ಚಿಕ್ಕ ವಯಸ್ಸಿನಲ್ಲಿ ಅಂದರೆ ತಮ್ಮ ೪೬ನೇ ವರ್ಷದಲ್ಲಿ ನಮ್ಮನ್ನೆಲ್ಲಾ ಅಗಲಿ ಹೋಗಿದ್ದಾರೆ. ಅವರು ಕೋಲಾರ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಸೇವಾದಳ ಸಮಿತಿಯ ಕಾರ್ಯದರ್ಶಿಯಾಗಿ ದುಡಿದಿದ್ದಾರೆ. ಅವರು ಲಯನ್ಸ್ ಕ್ಲಬ್‌ನ ಸದಸ್ಯರಾಗಿ ಮತ್ತು ಉಚಿತ ವೈದ್ಯಕೀಯ ಶಿಬಿರಗಳನ್ನು ನಡೆಸಿ ಸಮಾಜ ಸೇವಕರೆಂದು ಹೆಸರು ಪಡೆದಿದ್ದರು. ಬಾಗೇಪಲ್ಲಿ ಕ್ಷೇತ್ರ ಬಹಳ ಹಿಂದುಳಿದ ಪ್ರದೇಶವಾಗಿದೆ. ಇದು ನಮ್ಮ ರಾಜ್ಯದ ಬಾರ್ಡರ್ ಏರಿಯಾದಲ್ಲಿದ್ದಲ್ಲಿ ಬರುತ್ತದೆ. ಬಾಗೇಪಲ್ಲಿ ಟೌನ್ ನಮ್ಮ ರಾಜ್ಯದಲ್ಲಿ ಬಹಳ ಹಿಂದುಳಿದಂಥ ಪ್ರದೇಶವಾಗಿದೆ. ಇಂತಹ ಹಿಂದುಳಿದಂಥ ತಾಲ್ಲೂಕ್‌ನಲ್ಲಿ ಇವರು ೧೯೭–೧೯೪೨ ರಲ್ಲಿ ಜನಿಸಿದ್ದರು. ಈಗ ಅವರಿಗೆ ಕೇವಲ ೪೬ ವರ್ಷ ವಯಸ್ಸಾಗಿತ್ತು. ಅವರು ೭ ಮಕ್ಕಳನ್ನು ಹಾಗೂ ಸಮಸ್ತ ಪರಿವಾರವನ್ನೂ ಬಿಟ್ಟು ಅಗಲಿದ್ದಾರೆ. ಅವರು ಒಬ್ಬ ಯುವಕ ಸಮಾಜ ಸೇವಕರಾಗಿದ್ದರು ಹಾಗೂ ಒಳ್ಳೆಯ ಕಾರ್ಯಕರ್ತರಾಗಿದ್ದರು. ಅವರ ಅಗಲಿಕೆಯಿಂದ ವೈಯಕ್ತಿಕವಾಗಿ ನನಗೆ ಹಾಗೂ ನಮ್ಮ ಪಕ್ಷಕ್ಕೆ ಬಹಳ ನಷ್ಟವಾಗಿದೆ ಅವರು ಇಡೀ ಸದನದಲ್ಲಿ ಎಲ್ಲರೊಡನೆ ಒಳ್ಳೆಯ ಸದ್ಭಾವನೆಯ ಮಾತುಗಳನ್ನಾಡಿ ಯಾವಾಗಲು ನಗುನಗುತ್ತಾ ಇರುತ್ತಿದ್ದರು. ಅವರು ಕಷ್ಟದಲ್ಲಿದ್ದರೂ ಮತ್ತು ಬಡತನದಲ್ಲಿದ್ದರೂ ಸಹ ಅದನ್ನು ಯಾವುದೇ ರೀತಿಯಿಂದ ತೋರಿಸಿಕೊಳ್ಳದೆ ಯಾವಾಗಲೂ ಹಸನ್ಮುಖಿಯಾಗಿರುತ್ತಿದ್ದರು. ಅಂತಹವರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಆದ್ದರಿಂದ ನಾನು ನನ್ನ ಪತಿಯಿಂದ ಮತ್ತು ಇಡೀ ಸದನದ ಪತಿಯಿಂದ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ

ಎರಡನೆಯದಾಗಿ, ಶ್ರೀಮಾನ್ ಬಿ. ಎಲ್. ಗೌಡರು ಸುಮಾರು ೧೯೬೨ ರಲ್ಲಿ ಶಾಸಕರಾಗಿ ತದ ನಂತರ ೧೯೬೭ ರಲ್ಲಿ ಡೆಪ್ಯುಟಿ ಮಿನಿಸ್ಟರಾಗಿ ಕೆಲಸ ಮಾಡಿದಂಥ ಒಬ್ಬ ಹಿರಿಯ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರು ಸುಮಾರು ಈ ಒಂದು ಸದನದಲ್ಲಿ ೪ ಸಲ ಚುನಾಯಿತರಾಗಿದ್ದರು ೧೯೮೩ ರಲ್ಲಿ ತದನಂತರ ೧೯೮೫ ರಲ್ಲೂ ಕೂಡ ಅವರು ಚುನಾಯಿತರಾಗಿದ್ದರು. ಆದಾದಮೇಲೆ ಡಿಸೆಂಬರ್‌ನಲ್ಲಿ ಅವರು ರಾಜಿನಾಮೆ ಕೊಟ್ಟು ಕರ್ನಾಟಕ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಛೇರ್ಮನ್ನಾಗಿ ಕೆಲಸ ಮಾಡತಕ್ಕಂಥ ಒಂದು ಅವಕಾಶ ಕೂಡ ಅವರಿಗೆ ಸಿಕ್ಕಿತ್ತು. ಸುಮಾರು ೬೧ ವರ್ಷ ತುಂಬಿದಂಥ ಒಬ್ಬ ಹಿರಿಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಅವರು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಅವರು ಪ್ರತಿನಿಧಿಸತಕ್ಕಂಥ ಜಿಲ್ಲೆಕರೆ ತಾಲ್ಲೂಕಿನಲ್ಲಿ ಶುಗರ್ ಫ್ಯಾಕ್ಟರಿ ಕೆಲಸ ಆಗಲಿ, ಆಥವಾ ಸ್ಕೂಲ್, ಆಸ್ಪತ್ರೆಗಳ ಬಗ್ಗೆಯಾಗಲಿ ಮತ್ತಿತರ ಯಾವುದೇ ಸಾಮಾಜಿಕ ಚಟುವಟಿಕೆಗಳಲ್ಲಾಗಲಿ ಹೆಚ್ಚಿನ ಆಸಕ್ತಿ ತಳೆದು ಕೆಲಸ ಮಾಡಿದಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅದೂ ಅಲ್ಲದೆ ಕೊ–ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಹೆಚ್ಚಿನ ಆಸಕ್ತಿ ತಳೆದು ಪೈಪಂಠಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಡಿಸ್ಟ್ರಿಕ್ಟ್ ಕೊ–ಆಪರೇಟೀವ್ ಬ್ಯಾಂಕ್‌ಗಳಿಂದ ಹಿಡಿದು, ಶುಗರ್ ಫ್ಯಾಕ್ಟರಿ, ಮತ್ತು ಫೆಡರೇಷನ್ ಆಧ್ಯಕ್ಷರವರೆಗೆ ಕೆಲಸ ಮಾಡತಕ್ಕಂಥ ಒಂದು ಅವಕಾಶ ಕೂಡ ಅವರಿಗೆ ಸಿಕ್ಕಿತ್ತು. ಅವರು ಬಹಳ ಒಳ್ಳೆಯ ಹೆಸರನ್ನು ಗಳಿಸಿದ್ದರು. ಅಂತಹ ಒಬ್ಬ ವ್ಯಕ್ತಿಯನ್ನು ಕೂಡ ನಾವು ಕಳೆದುಕೊಂಡಿದ್ದೇವೆ. ಆದ್ದರಿಂದ ನಾನು ಅವರಿಗೂ ಈ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ರೇಷ್ಮೆ ಖಾತೆಯ ಸಚಿವರು).—ಸನ್ಮಾನ್ಯ ಉಪಾಧ್ಯಕ್ಷರೆ, ಇಂದು ಮುಂಜಾನೆ ನಾವು ನಮ್ಮ ಈ ಸಭೆಯಂ ಮಾಜಿ

ಸದಸ್ಯರು. ಹಿಂದೆ ಮುಂಶ್ರಿಗಳಾಗಿ ಕೆಲಸಮಾಡಿದಂಥ ಮತ್ತು ಹಾಲಿ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದಂಥ ಸನ್ಮಾನ್ಯ ಬಿ.ಎಲ್. ಗೌಡರವರ ಮತ್ತು ಹಾಲಿ ಸದಸ್ಯರಾಗಿ ಕೆಲಸಮಾಡಿದವರ ನಿಧನದ ಸಂತಾಪ ಸೂಚನೆಗೋಸ್ಕರ ಮತ್ತು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೋಸ್ಕರ ಇಲ್ಲಿ ಸೇರಿದ್ದೇವೆ. ಶ್ರೀ ನಾರಾಯಣಸ್ವಾಮಿಯವರು ಸನ್ಯಾನ್ಯ ಖಾರ್ಗೆಯವರು ಹೇಳಿದಹಾಗೆ, ಅವರು ಬಾಲ್ಯದಿಂದ ಸಮಾಜ ಸೇವಾ ಕ್ಷೇತ್ರದಲ್ಲಿ ನಾನಾ ಹಂತಗಳಲ್ಲಿ, ಮತ್ತು ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡಿಕೊಂಡು ಬಂದವರು. ವೃತ್ತಿಯಲ್ಲಿ ವೈದ್ಯರಾಗಿ ಅನೇಕ ಸೇವಾ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕೆಲಸಮಾಡಿ ಜನರ ಅನುರಾಗವನ್ನು ಮತ್ತು ಅಭಿಮಾನವನ್ನು ಗಳಿಸಿದಂಥ ವ್ಯಕ್ತಿ ಅವರು. ಮೇಲಾಗಿ ನಾರಾಯಣಸ್ವಾಮಿಯವರು ಅತ್ಯಂತ ಹಿಂದುಳಿದ ಕೋಮಿಗೆ ಸೇರಿದಂಥವರು. ಅಂತಹ ಜನ ವಿಧಾನಸಭೆಗೆ ಚುನಾಯಿತರಾಗಿ ಬರುವುದು ಕಷ್ಟ ಮತ್ತು ಅಪರೂಪ. ಇಂತಹ ಸನ್ನಿವೇಶದಲ್ಲಿ ಶ್ರೀಪಾನ್ ನಾರಾಯಣಸ್ವಾಮಿಯವರನ್ನು ವಿಶೇಷವಾಗಿ ಹಿಂದುಳಿದ ಭಾಗವಾದ ಗುಡಿಬಂಡೆ, ಬಾಗೇಪಲ್ಲಿ ಕ್ಷೇತ್ರಗಳನ್ನು ಪ್ರತಿನಿಧಿಸತಕ್ಕ ಗೌರವವನ್ನು, ಅಭಿಮಾನವನ್ನು ಸಂಪಾದನೆಮಾಡಿ ಆ ಕ್ಷೇತ್ರಗಳಿಗೆ ಸಾಕಷ್ಟು ಸಹಾಯವನ್ನು ಮಾಡಿದಂಥ ವ್ಯಕ್ತಿ ನಾರಾಯಣಸ್ವಾಮಿಯವರು. ಅವರ ನಿಧನದಿಂದ ಈ ಸಭೆಗೆ ತುಂಬಾ ನಷ್ಟವಾಗಿದೆ. ನಮಗೆಲ್ಲರಿಗೂ ಕೂಡ ಇದು ದುಃಖವನ್ನು ತಂದಿದೆ. ಅವರಿಗೆ ನಾನು ಸರ್ಕಾರದ ಪರವಾಗಿ ಮತ್ತು ನನ್ನ ಪರವಾಗಿ ಹೃತ್ಪೂರ್ವಕವಾದಂಥ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಸನ್ಮಾನ್ಯ ಶ್ರೀ ಬಿ.ಎಲ್. ಗೌಡರವರು ಅನೇಕ ವರ್ಷಗಳ ಕಾಲ ಜೀವನದ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದಂಥವರು. ಅವರು ಉಪಮುಂಶ್ರಿಯಾಗಿ, ಮುಂಶ್ರಿಯಾಗಿ ಸಹಕಾರ ಕ್ಷೇತ್ರದಲ್ಲಿ ಮತ್ತು ವ್ಯವಸಾಯ ಕ್ಷೇತ್ರದಲ್ಲಿ ಕೆಲಸಮಾಡಿ ಅನೇಕರೀತಿಯ ಸಹಾಯಗಳನ್ನು ಜನರಿಗೆ ಒದಗಿಸಿಕೊಟ್ಟಿರತಕ್ಕಂಥಾವರು. ಅವರು ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಕೂಡ ಕೆಲಸಮಾಡಿರತಕ್ಕಂಥಾವರು. ಪ್ರತಿಭೆಯಿಂದ ಕೂಡ ಅನೇಕ ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿ ಕೆಲಸಮಾಡಿದವರಿಗೆ ಮಾತ್ರ ಈ ಒಂದು ಸಾರ್ವಜನಿಕ ಸೇವೆ ಮಾಡುವುದಕ್ಕೆ ಅವಕಾಶ ಉಂಟಾಗುತ್ತದೆ. ಇದರಿಂದ ನಮಗೆ ಗೊತ್ತಾಗುತ್ತದೆ, ಅವರ ಪ್ರತಿಭೆ ಎಷ್ಟಿತ್ತು ಎನ್ನುವುದು. ಸಾರ್ವಜನಿಕ ಜೀವನದಲ್ಲಿ ಬಡವರಿಗೆ, ಹಿಂದುಳಿದವರಿಗೆ ಸಹಾಯ ಮಾಡುವಂಥ ಶಕ್ತಿ ಅವರಿಗೆ ಇತ್ತು ಎಂದು ನಮಗೆ ಗೊತ್ತಾಗುತ್ತದೆ. ಇಂಥವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರಿಗೆ ಅಷ್ಟೇನೂ ದೊಡ್ಡ ವಯಸ್ಸು ಇಗಿರಲಿಲ್ಲ. ಅಂಥ ಮಹನೀಯರನ್ನು ನಾವು ಇಂದು ಕಳೆದುಕೊಂಡಿರುವುದರಿಂದ ಉತ್ತಮ ಸೇವೆಯನ್ನು ಮಾಡತಕ್ಕ ವ್ಯಕ್ತಿಯೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ. ಆದ್ದರಿಂದ ಸರ್ಕಾರದ ಪರವಾಗಿ ಮತ್ತು ನನ್ನ ಪರವಾಗಿ ಈ ಇಬ್ಬರು ವ್ಯಕ್ತಿಗಳಿಗೆ ನಾನು ಹೃತ್ಪೂರ್ವಕ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ.

†ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಉಪಾಧ್ಯಕ್ಷರೆ, ಕಳೆದ ಶುಕ್ರವಾರದವರೆಗೂ ಬಹಳ ಚುರುಕಾಗಿ ಈ ಸದನದಲ್ಲಿ ಓಡಾಡುತ್ತಿದ್ದ ನಿಜವಾಗಿಯೂ ಸಮಾಜ ಸೇವಕರಾಗಿದ್ದಂಥ ಮಾನ್ಯ ನಾರಾಯಣಸ್ವಾಮಿಯವರು ಇಂದು ನಮ್ಮ ಮುಂದಿಲ್ಲ. ಶನಿವಾರ ಸುಮಾರು ಒಂದೂವರೆ ಗಂಟೆಯ ಸಮಯದಲ್ಲಿ ಅವರು ನಿಧನರಾದರು. ಅವರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಆಂಧ್ರ ಗಡಿಗಳಾದ ಬಾಗೇಪಲ್ಲಿ, ಗುಡಿಬಂಡೆ ಕ್ಷೇತ್ರದ ಜನರಿಗೆ ತುಂಬಾ ಚಿರಪರಿಚಿತರಾಗಿ ಎಲ್ಲರಿಗೂ ಬೇಕಾದವರಾಗಿದ್ದರು. ಬಾಗೇಪಲ್ಲಿಯ ಮತ್ತು ಪಾರಿ ಬಿದರೂರಿನ ಒಂದು ಭಾಗಕ್ಕೂ ಕೂಡ ಅವರು ಶಾಸಕರಾಗಿದ್ದರು. ನಾನು ನೋಡಿದಂತೆ ಅವರ ಕ್ಷೇತ್ರದಲ್ಲಿ ಎಲ್ಲ ವರ್ಗದ ಜನರ ಬಗ್ಗೆಯೂ ಪ್ರೀತಿಯುಳ್ಳವರಾಗಿದ್ದರು. ಜನರು ಇವರಿಗೆ ಕೈ ಮುಗಿಯುವ ಮೊದಲು ಇವರೇ ಅವರಿಗೆ ಕೈ ಮುಗಿದು ನಮಸ್ಕಾರ ಎಂದು ಹೇಳುತ್ತಿದ್ದ ಸೌಜನ್ಯ ಯುತ ವ್ಯಕ್ತಿ. ಅಂಥವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದಂತೆ ಇವರು ಹಿಂದುಳಿದ ವರ್ಗದಲ್ಲಿ ಅತೀ ಹಿಂದುಳಿದವರಾಗಿದ್ದರು. ಅವರಿಗೆ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ.

ಇನ್ನು ಮಾನ್ಯ ಬಿ.ಎಲ್. ಗೌಡರೂ ಕೂಡ ಬಹಳ ನಿಷ್ಠೆಯಿಂದ ಸಹಕಾರ ಕ್ಷೇತ್ರದಲ್ಲಿ ದುಡಿದಂಥ ವ್ಯಕ್ತಿ. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಪ್ರತಿನಿಧಿಸಿದ್ದರು. ಅವರನ್ನೂ ಕೂಡ ಇಂದು ನಾವು ಕಳೆದುಕೊಂಡಿದ್ದೇವೆ. ಇಂದು ಅವರು ನಮ್ಮ ಜೊತೆಯಲ್ಲಿಲ್ಲ. ಆದ್ದರಿಂದ ಅವರಿಗೂ ಕೂಡ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ.

†ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಮಾನ್ಯ ಶ್ರೀ ನಾರಾಯಣಸ್ವಾಮಿಯವರು ಮತ್ತು ಮಾನ್ಯ ಶ್ರೀ ಬಿ. ಎಲ್. ಗೌಡರವರೂ ಇಂದು ನಮ್ಮನ್ನು ಅಗಲಿದ್ದಾರೆ. ಶ್ರೀಯುತ ನಾರಾಯಣಸ್ವಾಮಿಯವರು ಅನೇಕ ಕ್ಷೇತ್ರಗಳಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಮತ್ತು ಲಯನ್ಸ್ ಸಂಸ್ಥೆಯಲ್ಲೂ ಕೂಡ ಸೇವೆ ಸಲ್ಲಿಸಿದ್ದಾರೆಂದು ನಾನು ಕೇಳಿದ್ದೇನೆ. ಅದೇರೀತಿ ಮಾನ್ಯ ಬಿ.ಎಲ್. ಗೌಡರೂ ಕೂಡ ಹಿರಿಯ ರಾಜಕೀಯ ಮುತ್ಸದ್ದಿಯಾಗಿ ಅನೇಕ ರಂಗಗಳಲ್ಲಿ ಸೇವೆಯನ್ನು ಸಲ್ಲಿಸಿದ್ದರು. ವಿಶೇಷವಾಗಿ ಅವರು ಸಹಕಾರಿ ಕ್ಷೇತ್ರದಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದರು. ಅಂಥ ಹಿರಿಯ ಸದಸ್ಯರು ಇಂದು ನಮ್ಮನ್ನು ಅಗಲಿದ್ದಾರೆ. ಇವರ ನಿಧನದಿಂದ ಅವರ ಕುಟುಂಬವರ್ಗದವರಿಗೆ ಉಂಟಾಗಿರುವ ಆಘಾತವನ್ನು ಸಹಿಸುವುದಕ್ಕೆ ಪರಮಾತ್ಮನು ಶಕ್ತಿ ಸಾಮರ್ಥ್ಯಗಳನ್ನು ನೀಡಲಿ ಮತ್ತು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಶನಿವಾರ ರಾತ್ರಿ ಡಾ॥ ಬಿ ನಾರಾಯಣಸ್ವಾಮಿಯವರು ಶಾಸಕರ ಭವನದಲ್ಲಿ ನಿಧನರಾದ ಸುದ್ದಿಯನ್ನು ಕೇಳಿ ನಮಗೆಲ್ಲಾ ತುಂಬಾ ಆಘಾತವಾಗಿತು. ಮಾನ್ಯ ನಾರಾಯಣಸ್ವಾಮಿಯವರು ಶಾಸಕರಾಗಿ ಮತ್ತು ತುಂಬಾ ಸರಳ ಸ್ವಭಾವದ ವ್ಯಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ನನಗಂತೂ ಅವರು ತುಂಬಾ ಚಿರಪರಿಚಿತ ವ್ಯಕ್ತಿಯಾಗಿದ್ದರು. ಅನೇಕ ಸಂದರ್ಭಗಳಲ್ಲಿ ರಾಜ್ಯದ ರಾಜಕೀಯಂ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಈ ಸಮಾಜದ ಈಗಿನ ವ್ಯವಸ್ಥೆಯನ್ನು ಯಾವ ರೀತಿ ಸರಿಪಡಿಸಬೇಕೆಂಬ ಬಗ್ಗೆ ಸದಾ ಚಿಂತನೆ ನಡೆಸುತ್ತಿದ್ದರು, ಅವರು ಹಿಂದುಳಿದ ವರ್ಗದವರ ಪೈಕಿ ಅತೀ ಹಿಂದುಳಿದವರಾಗಿದ್ದು ಉತ್ತಮ ಕೆಲಸವನ್ನು ಮಾಡುತ್ತಿದ್ದರು. ಅಂಥವರನ್ನು ಇಂದು ನಾವು ಕಳೆದುಕೊಂಡಿರುವುದು ಈ ಸದನಕ್ಕೆ ತುಂಬಲಾರದ ನಷ್ಟವಾಗಿದೆ.

ಇವರ ಜೊತೆಯಲ್ಲಿ ನನ್ನ ಜಿಲ್ಲೆಯವರೇ ಆದಂಥ ಮಾನ್ಯ ಬಿ. ಎಲ್. ಗೌಡರೂ ಕೂಡ ನಿಧನ ಹೊಂದಿದ್ದಾರೆ. ಅವರು ಒಬ್ಬ ಉತ್ತಮ ರಾಜಕೀಯಂ ಮುತ್ಸದ್ದಿಯಾಗಿದ್ದರು. ಈ ಶಾಸನ ಸಭೆಗೆ ೪ ಸಾರಿ ಚುನಾಯಿತರಾಗಿ ಬಂದು ಸೇವೆ ಸಲ್ಲಿಸಿದ್ದಲ್ಲದೆ ಅನೇಕ ಇತರ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದ್ದರು. ಅವರು ಇಡೀ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದರು. ಸಹಕಾರ ಕ್ಷೇತ್ರದಲ್ಲಿ ಅವರಿಗೆ ಅಪಾರವಾದ ಅನುಭವ ಇತ್ತು. ಅವರ ಅನುಭವದ ಆಧಾರದ ಮೇಲೆ ನಾಣಿವಿಲಾಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರು, ಮತ್ತು ಅವರು ಒಳ್ಳೆಯ ಸ್ವಭಾವ ಉಳ್ಳವರಾಗಿದ್ದರು. ಅವರು ಸಾಮಾನ್ಯ ಜನರನ್ನೂ ಕೂಡ ಬಹಳವಾಗಿ ಪ್ರೀತಿಸುತ್ತಿದ್ದರು. ಅವರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದರು. ಈ ರೀತಿ ಅವರು ಒಳ್ಳೆಯ ಸಮಾಜ ಸೇವೆಯನ್ನು ಮಾಡಿರತಕ್ಕಂಥ ವ್ಯಕ್ತಿಗಳಾಗಿದ್ದರು. ಅವರು ಚುನಾಯಿತರಾಗಿ ಬಂದ ಮೇಲೂ ಕೂಡ ಈ ಒಂದು ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ಅವರು ರಕ್ತದ ಒತ್ತಡ ಮತ್ತು ಸಕ್ಕರೆ ಕಾಯಿಲೆಯಿಂದಾಗಿ ಬಳಲುತ್ತಾ ಇದ್ದು ಕೊನೆಯ ಉಸಿರು ಅದರಿಂದಲೇ ಎಳೆಯಬೇಕಾಯಿತು. ಅವರು ನಮ್ಮ ಜಿಲ್ಲೆಯ ಒಬ್ಬ ಮಹಾನ್ ಮುತ್ಸದ್ದಿಗಳಾಗಿದ್ದರು. ಇವೊತ್ತಿನ ದಿವಸ ಒಳ್ಳೆಯ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದಂಥ ಮಾನ್ಯ ಬಿ. ಎಲ್. ಗೌಡರನ್ನು ಕಳೆದುಕೊಂಡುದುದು ಚಿತ್ರದುರ್ಗ ಜಿಲ್ಲೆಯ ಜನತೆಗೆ ತುಂಬಲಾರದ ಹಾನಿಯುಂಟಾಗಿದೆ ಎಂದು ಹೇಳಿದರೆ ತಪ್ಪಾಗಲಾರದೆಂದು ಹೇಳುತ್ತಾ ಈ ಸಂದರ್ಭದಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದ ಮಾನ್ಯ ನಾರಾಯಣಸ್ವಾಮಿಯವರ ಮತ್ತು ಮಾನ್ಯ ಬಿ. ಎಲ್. ಗೌಡರ ನಿಧನದ ಬಗ್ಗೆ ನಾನು ನನ್ನ ವೈಯಕ್ತಿಕವಾಗಿ ಹಾಗೂ ನನ್ನ ಪಕ್ಷದ ಪರವಾಗಿ ಸಂತಾಪವನ್ನು ವ್ಯಕ್ತಪಡಿಸಿ ಅವರ ಕುಟುಂಬ ವರ್ಗದವರ ದುಃಖದಲ್ಲಿ ನಾವು ಕೂಡ ಪಾಲುಗಾರರಾಗಿ ಅವರಿಗೆ ದುಃಖವನ್ನು ಭರಿಸುವ ಶಕ್ತಿ ಬರಲಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಏಕಾಂತಯ್ಯ (ಸಹಕಾರ ಸಚಿವರು).—ಸನ್ಮಾನ್ಯ ಉಪಾಧ್ಯಕ್ಷರೇ ಶ್ರೀಯುತ ನಾರಾಯಣಸ್ವಾಮಿ ಮಂತ್ರಿ, ಶ್ರೀಯುತ ಬಿ. ಎಲ್. ಗೌಡರ ನಿಧನದಿಂದಾಗಿ ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ನಾನು ಭಾವಿಸುತ್ತೇನೆ. ಶ್ರೀಯುತ ಬಿ.ಎಲ್. ಗೌಡರು ಚಿತ್ರದುರ್ಗ ಜಿಲ್ಲೆಯ ಮತದಾರ ಕ್ಷೇತ್ರದಿಂದ ಆರಿಸಿ ಬಂದ ಪ್ರತಿನಿಧಿಯಾಗಿ, ಮಂತ್ರಿಗಳಾಗಿ ಕರ್ನಾಟಕ

ರಾಜ್ಯದ, ಮತ್ತು ರಾಷ್ಟ್ರಮಟ್ಟದ ಅನೇಕ ಸಹಕಾರಿ ಸಂಘಗಳ ಪ್ರತಿನಿಧಿಗಳಾಗಿದ್ದರು. ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಸಹ ಅವರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಸಹಕಾರಿ ಸಂಸ್ಥೆಗಳ ಸ್ಥಾಪನೆಗಾಗಿ ಬಹಳವಾಗಿ ಶ್ರಮಿಸಿ ಅದರ ಕಾರ್ಯಕರ್ತರಾಗಿಯೂ ಕೆಲಸ ಮಾಡಿದ್ದಾರೆ. ಅದೇ ರೀತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿಯೂ ಸಹ ಅನೇಕ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ಸಾರ್ವಜನಿಕರಿಗೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಅವರು ಬಹಳ ಉತ್ತಮವಾದ ರಾಜಕಾರಣಿಗಳಾಗಿ ಬಡವರ ಬಗ್ಗೆ ಬಹಳ ಅನುಕಂಪವನ್ನು ಉಳ್ಳವರಾಗಿದ್ದರು. ಅವರ ನಿಧನ ಕೇವಲ ರಾಷ್ಟ್ರಕ್ಕೆ ಮಾತ್ರವಲ್ಲ ಇಡೀ ಚಿತ್ರದುರ್ಗ ಜಿಲ್ಲೆಯ ಬಡವರಿಗೆ ಬಹಳ ನಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಅವರು ಇಲ್ಲಿಯವರೆಗೂ ನಡೆದುಕೊಂಡು ಬಂದ ದಾರಿ ಎಲ್ಲರಿಗೂ ದಾರಿದೀಪವಾಗುತ್ತದೆಂದು ಭಾವಿಸಂತ್ತೇನೆ.

ಅದೇ ರೀತಿಯಲ್ಲಿ ಶ್ರೀಯುತ ಬಿ. ನಾರಾಯಣಸ್ವಾಮಿಯವರು ಬಾಗೇಪಲ್ಲಿ ಕ್ಷೇತ್ರದಿಂದ ಆಯ್ಕೆಯಾಗಿದ್ದು ಅವರ ನಿಧನದಿಂದ ಸಂಪೂರ್ಣವಾಗಿ ಆ ಒಂದು ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಅವರನ್ನು ನಾನು ವೈಯಕ್ತಿಕವಾಗಿ ಭೇಟಿ ಮಾಡಿದ್ದೇನೆ. ಬಡವರ ಬಗ್ಗೆ ಬಹಳ ಅನುಕಂಪ ಉಳ್ಳವರಾಗಿ ಅವರ ಬಗ್ಗೆ ಹೆಚ್ಚಿನ ಮುತುವರ್ಜಿವಹಿಸಿ ಕೆಲಸ ಮಾಡುತ್ತಿದ್ದ ಶಾಸಕರಲ್ಲಿ ಒಬ್ಬರಾಗಿದ್ದರು. ಪಕ್ಷಾತೀತವಾಗಿ ನೋಡಿದರೆ ಇಬ್ಬರ ನಿಧನದಿಂದ ನಮ್ಮ ರಾಜ್ಯಕ್ಕೆ ಬಹಳ ನಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಅವರ ನಿಧನದಿಂದ ಉಂಟಾಗಿರುವ ನಷ್ಟವನ್ನು ಭರಿಸಲು ಶಕ್ತಿಯನ್ನು ಕೊಡಲಿ ಎಂದು ವೈಯಕ್ತಿಕವಾಗಿ ನನ್ನ ಸಂತಾಪವನ್ನು ಈ ಸಂದರ್ಭದಲ್ಲಿ ಅರ್ಪಿಸಬಯಸುತ್ತೇನೆ.

† ಕೆ. ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ).—ಸನ್ಮಾನ್ಯ ಉಪಾಧ್ಯಕ್ಷರೇ ಈವತ್ತಿನ ದಿವಸ ಈ ಸದನದ ಸದಸ್ಯರಾದ ಶ್ರೀಯುತ ಬಿ. ನಾರಾಯಣಸ್ವಾಮಿಯವರು ಮತ್ತು ಹಿರಿಯ ಸದಸ್ಯರಾದ ಶ್ರೀಯುತ ಬಿ. ಎಲ್. ಗೌಡರ ನಿಧನದಿಂದಾಗಿ ನಮ್ಮೆಲ್ಲರಿಗೂ ಅತೀವವಾದ ದುಃಖವಾಗಿದೆ. ಮಾನ್ಯ ಬಿ. ಎಲ್. ಗೌಡರು ಇಡೀ ಕರ್ನಾಟಕಕ್ಕೆ ಗೊತ್ತಿರುವಂಥ ಮನುಷ್ಯರು. ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಂಥ ವ್ಯಕ್ತಿಗಳು. ಈ ಸಭೆಯ, ಸದಸ್ಯರಾಗಿ ಮಂತ್ರಿಗಳಾಗಿ ಮತ್ತು ಸಹಕಾರಿ ಸಚಿವರಾಗಿ, ಸಹಕಾರಿ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದಂಥ ವ್ಯಕ್ತಿಗಳಾಗಿದ್ದರು. ಶ್ರೀಯುತ ನಾರಾಯಣಸ್ವಾಮಿಯವರು ಬಾಗೇಪಲ್ಲಿ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿ ತುಂಬ ಜನಮಿತ್ರರಾಗಿದ್ದರು. ರಿಲೆಶನೇ ಇಷಮಿಯಲ್ಲಿ ಅವರು ವಿಧಾನ ಸಭೆಗೆ ಚುನಾಯಿತರಾಗಿ ಆಯ್ಕೆಯಾಗಿ ಬಂದಿದ್ದರು. ನಾನು ಸಹ ಅವರ ಹೋಬಳಿಗೆ ಸೇರಿರತಕ್ಕಂಥವನು. ಈ ಕ್ಷೇತ್ರದಲ್ಲಿ ಮೂರು ಜನ ಸದಸ್ಯರಿದ್ದೇವೆ. ನಾನು, ಮತ್ತು ಮಾನಿಸ್ವಾಮಪ್ಪ ಇಬ್ಬರು ಶಾಸಕರು. ಪಂಕ್ತೆ ಪಾರ್ಲಿಮೆಂಟಿನ ಇಬ್ಬರು ಸದಸ್ಯರು ಅಂದರೆ ಗುಡಿಬಂಡೆ ಮತ್ತು ಬಾಗೇಪಲ್ಲಿ ಎರಡೂ ಸೇರಿ ಇಬ್ಬರು ಪಾರ್ಲಿಮೆಂಟ್ ಸದಸ್ಯರು ಮತ್ತು ಮೂರು ಜನ ಶಾಸಕರು ಇದ್ದಂಥ ಈ ಕ್ಷೇತ್ರದಲ್ಲಿ ಎಲ್ಲರೊಂದಿಗೂ ಸಹಕರಿಸಿ ಬಹಳ ಸರಳವಾಗಿ ಜನಪರವಾಗಿ ಯಾವುದೇ ತೀರ್ಮಾನಕ್ಕೆ ಅಡ್ಡಿ ಬಾರದೆ ಸ್ಪಂಧಿಸುತ್ತಿದ್ದಂಥ ವ್ಯಕ್ತಿ ನಾರಾಯಣಸ್ವಾಮಿಯವರು.

ಇಂದು ಬಾಗೇಪಲ್ಲಿ ಕ್ಷೇತ್ರದಲ್ಲಿ ಎಲ್ಲ ರಾಜಕೀಯ ಪಕ್ಷಗಳು, ಎಲ್ಲ ಸಂಘ ಸಂಸ್ಥೆಗಳು ನಾರಾಯಣಸ್ವಾಮಿಯವರ ಗುಣಗಾನ ಮಾಡುತ್ತಿವೆ. ನನಗಂತೂ ಅವರು ಪರಮ ಮಿತ್ರರಾಗಿದ್ದರು. ಯಾವುದೇ ಸಂದರ್ಭದಲ್ಲಿ ಮಂತ್ರಿಯಾಗಿದ್ದಾಗ ಅಥವಾ ಸದಸ್ಯನಾಗಿದ್ದಾಗ ಯಾವುದೇ ವ್ಯತ್ಯಾಸ ಇಲ್ಲದೆ ಜನಪರ ಕಾರ್ಯಕ್ರಮಗಳಲ್ಲಿ ಇಬ್ಬರೂ ಒಂದಾಗಿ ಕೆಲಸ ಮಾಡುತ್ತಿದ್ದೆವು. ಹಿಂದಿನ ಭಾನುವಾರ ೪ ಗಂಟೆಗಳ ಕಾಲ ಅವರ ಕ್ಷೇತ್ರದಲ್ಲಿ ನಾನು ಕೂಡ ಇದ್ದೆ. ಹಿಂದಿನ ಭಾನುವಾರ ಇದ್ದ ಒಬ್ಬ ಸದಸ್ಯರು ಈ ಭಾನುವಾರ ಇಲ್ಲವಲ್ಲ ಎಂಬ ದುಃಖ ಅಪಾರವಾಗಿದೆ. ನಾನು ನಿನ್ನೆ ದಿವಸ ಅವರ ಶವ ಸಂಸ್ಕಾರಕ್ಕೆ ಹೋದಾಗ ಇಡೀ ತಾಲ್ಲೂಕಿನ ಜನ ರಾಜಕೀಯ ಪಕ್ಷಗಳ ವ್ಯತ್ಯಾಸವಿಲ್ಲದೆ ಸಂತಾಪವನ್ನು ಸೂಚಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಪ್ರಬಲ ಕೋಮುಗಳಿರುವ ಒಂದು ಕ್ಷೇತ್ರದಲ್ಲಿ ಬೆರಳೆಣಿಕೆಯಷ್ಟಿರುವ ಕೋಮಿನ ಪ್ರತಿನಿಧಿಯಾಗಿ ಗೆದ್ದುಬಂದಿರುವುದು ಸಾಮಾನ್ಯ ವಿಷಯವಲ್ಲವೆಂದು ತಿಳಿಯಬೇಕಾಗಿದೆ. ಜನ ಜಾತಿ ಮತಕ್ಕೆ ಸಹಕಾರ ಕೊಡುತ್ತಿಲ್ಲ, ವ್ಯಕ್ತಿಯ ಸರಳತೆಗೆ ಮನ್ನಣೆ ಕೊಡುತ್ತದೆಂಬುದನ್ನು ಈ ಪ್ರತಿನಿಧಿಗಳು ಸ್ಪಷ್ಟಪಡಿಸಿದ್ದಾರೆ, ಅಷ್ಟೇ ಅವರು ಆದರ್ಶವಾಗಿದ್ದಾರೆ. ಡಾ. ನಾರಾಯಣಸ್ವಾಮಿಯವರು ಈ ದಿನ ನಮ್ಮೊಂದಿಗೆ ಇಲ್ಲ. ಈ ಕರ್ನಾಟಕದಲ್ಲಿ ಅಲ್ಲ, ಎಲ್ಲೇ ಆಗಲಿ ಬೆರಳೆಣಿಕೆಯಷ್ಟಿಲ್ಲದ ಜನಾಂಗದ ಪ್ರತಿನಿಧಿಯಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಜನತೆಯೊಂದಿಗೆ ಸ್ಪರ್ಧಿಸಿದರೂ

ಯಾವುದೇ ಕ್ಷೇತ್ರವಲ್ಲಿ ಆದಾಯನ್ನು ಗಳಿಸುತಿರುತಕ್ಕ ಜನ ದೇಶದಲ್ಲಿದ್ದಾರೆ ಎಂಬುದನ್ನು ನಾರಾಯಣಸ್ವಾಮಿಯವರಿಂದ ಕಲಿಯಬೇಕಾಗಿದೆ. ಅಂಥ ವ್ಯಕ್ತಿಯನ್ನು ಕಳೆದುಕೊಂಡ ನಮಗೆ ಅಪಾರ ದುಃಖ ಉಂಟಾಗಿದೆ. ಜಿಲ್ಲೆಯಲ್ಲಿ ಬೆರಳಣಿಕೆಯಷ್ಟಿಲ್ಲದ ಜನಾಂಗದ ಪ್ರತಿನಿಧಿಯಾಗಿದ್ದವರು ಇವತ್ತು ಇಲ್ಲವಲ್ಲ ಎಂದು ದುಃಖವಾಗಿದೆ. ಇಡೀ ಸಭೆಯು ಸದಸ್ಯರ ದುಃಖದೊಂದಿಗೆ ನನ್ನ ದುಃಖವನ್ನು ತೋಡಿಕೊಂಡು, ಅವರ ಕುಟುಂಬ ಮತ್ತು ಅವರ ಮಕ್ಕಳ ಪರಿಸ್ಥಿತಿಯನ್ನು ನೋಡಿದರೆ ಅಪಾರ ದುಃಖವಾಗುತ್ತದೆ. ನಾರಾಯಣಸ್ವಾಮಿಯವರು ಅಪಾರ ಸಾಲಸೋಲಗಳನ್ನು ಹೊತ್ತಿದ್ದಾರೆ ಆರ್ಥಿಕವಾಗಿ ಅವರ ಕುಟುಂಬ ತುಂಬಾ ಕೆಳ ಮಟ್ಟದಲ್ಲಿದೆ. ನಾವೆಲ್ಲ ಸೇರಿ ಒಂದು ಪರಿಹಾರವನ್ನು ಕೊಡತಕ್ಕದ್ದು ಒಳ್ಳೆಯದೆಂದು ಬಹಾನ್ಯ ಸದಸ್ಯರಲ್ಲಿ ಬೇಡಿಕೊಂಡು ನಾವಲ್ಲ ಸೇರಿ ಒಂದು ಸಮಿತಿಯನ್ನು ಮಾಡಿ ಅಥವಾ ನಮ್ಮಲ್ಲಿ ಎಲ್ಲಾ ಸದಸ್ಯರು ಸೇರಿ ಆರ್ಥಿಕವಾಗಿ ಅವರ ಕುಟುಂಬಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು ನನ್ನ ಸಂತಾಪವನ್ನು ಸೂಚಿಸುತ್ತೇನೆ.

ಶ್ರೀ ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಉಪಾಧ್ಯಕ್ಷರೆ, ಪ್ರಸ್ತುತ ಅಸೆಂಬ್ಲಿಯ ಮಂತ್ರಿ ಕಾಂಗ್ರೆಸ್ಸಿನ ಸದಸ್ಯರಾಗಿರತಕ್ಕ ಡಾ, ನಾರಾಯಣಸ್ವಾಮಿಯವರ ದುಃಖವನ್ನು ತಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ಇಷ್ಟೆ. ನಾವು ರಾಜಕೀಯದಲ್ಲಿ ಹಲವಾರು ಮೌಲ್ಯಗಳನ್ನು ಇವತ್ತು ಪಾಲಿಸಿಕೊಂಡು ಬರುತ್ತಿದ್ದೇವೆ. ಹಿಂದುಳಿದ ಆದರಲ್ಲೂ ಅತೀ ಹಿಂದುಳಿದ ಜನಾಂಗಕ್ಕೆ ಸೇರಿರತಕ್ಕ ಒಬ್ಬ ವ್ಯಕ್ತಿ ಯಾವ ರಾಜಕೀಯ ಪಕ್ಷ ಭೇದಭಾವ ಜಾತಿ ಭೇದಭಾವ ಇಲ್ಲದೆ ಇಲ್ಲದೆ ತಾವು ಸೇರಿರತಕ್ಕ ಜಾತಿ ಉತ್ತಮ ಇಲ್ಲದಿದ್ದರೂ ಎಲ್ಲ ಜನರ ಅಭಿಮಾನಕ್ಕೆ ಪಾತ್ರರಾಗಿ ಸಾರ್ವಜನಿಕ ಮೌಲ್ಯಗಳನ್ನು ಪ್ರತಿಬಿಂಬಿಸತಕ್ಕ ನಾರಾಯಣಸ್ವಾಮಿಯವರಂ ಇವತ್ತು ನಮ್ಮೊಂದಿಗೆ ಇಲ್ಲ. ಅದೇ ರೀತಿ ಬಿ. ಎಲ್. ಗೌಡರಂ ತುಮಕೂರಂ ಜಿಲ್ಲೆಯನ್ನು ಒಂದಂ ಸಾರಿ ಪ್ರತಿನಿಧಿಸಿದ್ದರು. ನನ್ನ ತಾಲ್ಲೂಕಿಗೆ ಸೇರಿದ ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೇರಿದ ಎರಡು ಹೋಬಳಿಗಳನ್ನು ಪ್ರತಿನಿಧಿಸಿದ್ದರು. ನನ್ನ ಚಿತ್ರದುರ್ಗ ಜಿಲ್ಲೆಯಲ್ಲಿ ಅವರು ಸೇವೆಯನ್ನು ಮಾಡಿಕೊಂಡು ಬಂದಿದ್ದಾರೆ. ಅವರು ಒಬ್ಬ ಬಡ ಉಪಾಧ್ಯಾಯರ ಮಗನಾಗಿ ಓದ ಬೇಕಾದರೆ ಬಹಳ ಕಷ್ಟದಲ್ಲಿ ಓದಿಕೊಂಡು ಬಂದರು ಅವರ ಕಷ್ಟದ ಜೀವನವನ್ನು (ಅವರು ನನಗೆ ಹೊತ್ತಿರುವುದರಿಂದ) ಇವತ್ತು ನೆನಸಿಕೊಂಡರೆ ನಿಜಕ್ಕೂ ದುಃಖವಾಗುತ್ತದೆ. ಹೀಗೆ ಹೋರಾಟ ಮಾಡಿಕೊಂಡು ಬಡ ಉಪಾಧ್ಯಾಯರ ಮಗನಾಗಿ ವಕೀಲ ವೃತ್ತಿಯನ್ನು ಅವಲಂಬಿಸಿದ ಅವರು ಬಹಳ ಯಶಸ್ವಿಯಾಗಿ ಎಲ್ಲರ ಒಂದು ಅಭಿಮಾನಕ್ಕೆ ಪಾತ್ರರಾಗಿ ಬೆಳೆದು ಬಂದರು. ಹಾಗೆಯೇ ಸಾರ್ವಜನಿಕ ಜೀವನದಲ್ಲಿ. ರಾಜಕೀಯ ಜೀವನದಲ್ಲಿ ಹಲವಾರು ಸ್ಥಾನಮಾನಗಳನ್ನು ಇಟ್ಟುಕೊಂಡು ಆ ಸ್ಥಾನಮಾನಗಳ ಗೌರವನ್ನು ಕಾಪಾಡಿಕೊಂಡು ಆ ಸ್ಥಾನಮಾನದ ಮೌಲ್ಯಗಳನ್ನು ಕಾಪಾಡಿಕೊಂಡು ಆ ಮೌಲ್ಯಗಳನ್ನು ಪ್ರತಿಬಿಂಬಿಸತಕ್ಕ ಧೈರ್ಯಸ್ಥೈರ್ಯವನ್ನು ಇಟ್ಟುಕೊಂಡು ಇವತ್ತು ಅವರು ನಮ್ಮೊಂದಿಗೆ ಇಲ್ಲದಿರುವುದು ನಿಜಕ್ಕೂ ದುಃಖದ ಸಂಗತಿ. ಅವರ ಕಾರ್ಯಕ್ಷೇತ್ರ ಕೇವಲ ಚಿತ್ರದುರ್ಗ ಆಗಿರಲಿಲ್ಲ. ಅವರ ಕಾರ್ಯಕ್ಷೇತ್ರ ಇಡೀ ರಾಷ್ಟ್ರವೇ ಆಗಿತ್ತು ಎಂದರೆ ತಪ್ಪಾಗಲಾರದು. ಏಕೆಂದರೆ ಎಲೆವಂರೆ ತಾಲ್ಲೂಕಿನಂತೆ ರಾಷ್ಟ್ರವಷ್ಟಲ್ಲದೆ ಅವರು ಸೇವೆ ಸಲ್ಲಿಸುತ್ತಾ ಬಂದಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಕೂಡ ಸೇವೆ ಸಲ್ಲಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಕೂಡ ಸೇವೆ ಸಲ್ಲಿಸಿದ್ದಾರೆ. ನಾನು ಅಂತಿಮ ಸಂಸ್ಕಾರಕ್ಕೆ ಹೋದಾಗ ನಿಜಕ್ಕೂ ಬಹಳ ದುಃಖವಾಯಿತು. ಅವರ ಸಂಬಂಧಿಕರಲ್ಲದೆ ಕಡುಬಡವರೂ ಕೂಡ ದುಃಖದಿಂದ ಬಂದು ಶವಸಂಸ್ಕಾರದ ಸಂದರ್ಭದಲ್ಲಿ ಭಾಗವಹಿಸಿದ್ದನ್ನು ನೋಡಿದಾಗ ನಿಜವಾಗಿಯೂ ದುಃಖ ತಡೆಯಲಾರದ ಸ್ಥಿತಿ ಉಂಟಾಯಿತು. ನಮ್ಮ ಚಿತ್ರದುರ್ಗ ಜಿಲ್ಲೆಯ ಮಂತ್ರಿಗಳಾದ ಶ್ರೀ ಏಕಾಂತಪ್ಪನವರೂ ಕೂಡ ಬಂದಿದ್ದರು. ಅವರೂ ಕೂಡ ಭಾಗವಹಿಸಿದ್ದರು. ಬಡವರಂ ಬಂದಂ ದುಃಖವನ್ನು ವ್ಯಕ್ತ ಮಾಡಿದ್ದನ್ನು ನೋಡಿದಾಗ ಅವರು ಎಷ್ಟು ಜನಾನುರಾಗಿಯಾಗಿದ್ದರು, ಬಡವರಲ್ಲಿ ಎಷ್ಟು ಒಂದಾಗಿದ್ದರು ತಾನೂ ಬಡವ ಎಂಬುದನ್ನು ಎಷ್ಟೊಂದು ಅರಿತುಕೊಂಡಿದ್ದರು ಎಂಬುದು ನಿಜವಾಗಿ ಗೊತ್ತಾಯಿತು. ಇವತ್ತು ಅವರು ನಮ್ಮೊಡನೆ ಇಲ್ಲದೇ ಇರುವುದರಿಂದ ಆದ ನಷ್ಟವನ್ನು ಭರಿಸಲಾರದ ಪರಿಸ್ಥಿತಿಯಲ್ಲಿದ್ದೇವೆ. ಅವರ ಮತ್ತು ನಾರಾಯಣಸ್ವಾಮಿಯವರ ಕುಟುಂಬದವರಿಗೆ ದೇವರು ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ದುಃಖವನ್ನು ಭರಿಸುವ ಶಕ್ತಿ ಕೊಡಲೆಂದು ಈ ಸಭೆಯಲ್ಲಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

†Sri M. Mohammad Liaqddin (Bidar).—Mr. Deputy Speaker, Sir, I was really shocked to hear the news of the sudden death of Dr

Narayana Swamy. It was quite unbelievable because he was sitting by my side before his death when the Assembly was on. Dr. Narayana Swamy was a most sincere and silent worker. He worked hard for the upliftment of the poor and the downtrodden in his constituency and till the last day of his life he was in the Assembly. Last time he told me that we are here to serve our people and justify our presence in the Assembly to fulfil the desire and aspirations of our people. Those were the last words that he uttered before me when he was sitting in the Assembly. I pay warm tribate for his services to the downtrodden people.

Similarly I also pay tribute to Sri B. L. Gowda who was a very straight forward man. He was having a clear vision and he was a man of balanced thinking. In various capacities he has served the people, as a Chairman of the Public Service Commi sion and a Minister. In his death a void is created. He was a very senior and elder leader. I pray Almighty God to rest their soul in eternal peace and give strength to their family members to bear the loss. Thank you.

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಾಪುರ) ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸದಸ್ಯರು ವ್ಯಕ್ತ ಪಡಿಸಿದ ಭಾವನೆಗಳಲ್ಲಿ ನಾವೆಲ್ಲಾ ಇತ್ತ, ಶ್ರೀಮಾನ್ ಬಿ.ಎಲ್. ಗೌಡರು ಮತ್ತು ನಾರಾಯಣ ಸ್ವಾಮಿಯವರ ಮರಣದಿಂದ ನಾವು ಇಬ್ಬರು ನಾಯಕರನ್ನು ಕಳೆದುಕೊಂಡಿದ್ದೇವೆ. ಶ್ರೀಮಾನ್ ಬಿ. ಎಲ್. ಗೌಡರು ರಾಜ್ಯದ ಒಬ್ಬ ಹಿರಿಯ ನಾಯಕರು ಆಗಿದ್ದರು. ಕೃಷಿ, ಸಹಕಾರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ತಮ್ಮದೇ ಆದಂಥ ಪಾತ್ರವನ್ನು ಅವರು ಪಹಿಸಿದ್ದರು. ಈ ರಾಜ್ಯಕ್ಕೆ ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಗೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟುಹೋಗಿದ್ದಾರೆ. ಅವರು ಬಹಳ ಮೃದು ಸ್ವಭಾವದವರು, ಸರಳ ವ್ಯಕ್ತಿಗಳು, ಸ್ನೇಹದಲ್ಲಿ ಅತ್ಯಂತ ಪಾತ್ರಲ್ಯವುಳ್ಳವರು. ಶ್ರೀಮಾನ್ ಬಿ. ಎಲ್. ಗೌಡರು ಸಹಕಾರಿ ಮಂತ್ರಿಯಾಗಿ, ಕೃಷಿ ಮಂತ್ರಿಯಾಗಿ ಕಾರ್ಯ ಮಾಡಿದ್ದಾರೆ. ಸುಮಾರು ೨೫ ವರ್ಷಗಳಿಂದ ಅವರ ಸಂಬಂಧ ನಮಗಿತ್ತು. ಇವರು ಯಾವಾಗಲೂ ಗೆಳೆಯರನ್ನು ಕಾಯ್ದುಕೊಳ್ಳಕ್ಕವರು, ಗೆಳೆತನವನ್ನು ಬೆಳೆಸಿಕೊಳ್ಳತಕ್ಕವನೆ ಆಗಿದ್ದರು. ಇವರು ಸಿಟ್ಟಿಗೆದ್ದ ವಿಚಾರವನ್ನು ನಾನೆಂದೂ ಕೇಳಲಿಲ್ಲ ಅಥವಾ ಕಾಣಲಿಲ್ಲ. ರಾಜಕೀಯ ಅಥವಾ ಬೇರೆ ಕ್ಲಿಷ್ಟ ಸಂದರ್ಭಗಳಲ್ಲೂ ಕೂಡಾ ಸಂಯಮದಿಂದ ನಡೆದುಕೊಳ್ಳತಕ್ಕ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದೆವೆ, ಅವರ ಮರಣದಿಂದ ರಾಜ್ಯದ ಒಬ್ಬ ಮುತ್ಸದ್ದಿ ಇಲ್ಲದಂತಾಗಿದೆ. ನಾರಾಯಣಸ್ವಾಮಿಯವರು ಶಾಸಕರಾದ ಮೇಲೆ ನನಗೆ ಅವರ ಪರಿಚಯವಾಗಿತ್ತು. ನಾನು ಮೂರನ್ನಾಲ್ಕು ಸಾರಿ ಕೋಲಾರ ಜಿಲ್ಲೆಗೆ ಹೋದಾಗ, ಅದರಲ್ಲೂ ವಿಶೇಷವಾಗಿ ಬರಗಾಲದ ಪರೀಕ್ಷೆಗಾಗಿ ಹೋದಾಗ ಅವರು ತಮ್ಮ ತಾಲ್ಲೂಕಿನ ಜನತೆಗೆ ಯಾವ ರೀತಿ ಹಗಲಿರುಳೂ ಸೇವೆ ಮಾಡುತ್ತಾರೆನ್ನುವುದನ್ನು ಕಂಡುಕೊಂಡೆ. ಕೋಲಾರದಲ್ಲಿರತಕ್ಕ ಗೋಶಾಲೆಗೆ ಪ್ರತಿದಿನ ಅವರು ಭೇಟಿ ಕೊಟ್ಟು ಅಲ್ಲಿರತಕ್ಕ ದನಕರುಗಳಿಗೆ ಮೇವು ಹಾಗೂ ನೀರನ್ನು ಸರಿಯಾದ ಪ್ರಮಾಣದಲ್ಲಿ ನೀಡುತ್ತಿರುವರೇ ಎಂದು ಪ್ರತ್ಯಕ್ಷವಾಗಿ ನೋಡಿ ಅಲ್ಲಿರತಕ್ಕ ಪುಸ್ತಕದಲ್ಲಿ ಬರೆಯುತ್ತಿದ್ದರು, ಅಲ್ಲಿ ಏನು ತಪ್ಪು ಆಗಿದೆ, ಏನು ತೊಂದರೆ ಇದೆ ಎಂಬುದನ್ನೆಲ್ಲಾ ನಮಗೊಪ್ಪಿಸಿದ್ದು ಅದನ್ನು ನನಗೆ ತೋರಿಸಿದ್ದರು. ಎಂದರೆ ಒಬ್ಬ ಶಾಸಕನಾದವರು ಇಷ್ಟು ಮಟ್ಟಿಗೆ ಪಹಿಸಿ ಕೆಲಸ ಮಾಡಿದ್ದನ್ನು ನಾನು ನೋಡಿಯೇ ಇರಲಿಲ್ಲ. ಜೊತೆಗೆ ಇವರು ಕಡು ಬಡವರ ಬಂದು ಕುಟುಂಬದಿಂದ ಬಂದಿರುವವರು ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಕೃಷ್ಣಾರೆಡ್ಡಿಯವರು ಅವರ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ನಾವೂ ಸ್ವಲ್ಪ ಆಲೋಚನೆ ಮಾಡಿ ಅವರ ಕುಟುಂಬಕ್ಕೆ ಸಹಾಯ ಮಾಡುವುದು ಅವಶ್ಯಕ. ಸಹಾಯ ಮಾಡಬೇಕು ಎನ್ನುವ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಈ ಬಗ್ಗೆ ಕೃಷ್ಣಾರೆಡ್ಡಿಯವರು ಮುಂದುತ್ವವನ್ನು ವಹಿಸಲಿ, ನಾವೂ ಸಹಾಯ ಮಾಡೋಣ ಎಂದು ಹೇಳಿ

ಮೃತರ ಕುಟುಂಬಕ್ಕೆ ಆದ ದುಃಖದಲ್ಲಿ ನಾವೂ ಪಾಲ್ಗೊಳ್ಳೋಣ ಹಾಗೂ ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಬೇಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಸ್ನೇಹ, ಅನೇಕ ವೇಳೆ ಒಂದು ಸಂಬಂಧ. ಅಗಲಿಕೆ ದುಃಖದ ಸಂದರ್ಭ. ನಾವು ರಾಜ್ಯದ ಯಾವ್ಯಾವುದೋ ಪಕ್ಷಗಳಲ್ಲಿರುತ್ತೇವೆ. ಯಾವ್ಯಾವುದೋ ಭಾಗಗಳಿಂದ ಬಂದಿರುತ್ತೇವೆ. ಇಲ್ಲಿ ಬಂದು ನಾವು ಒಳ್ಳೆಯ ಸ್ನೇಹಿತರಾಗಿರುತ್ತೇವೆ. ನಮ್ಮ ವಿಚಾರಧಾರೆಗಳನ್ನು ಹೇಳಬೇಕಾದರೆ ಸ್ನೇಹ ಹಲವೊಮ್ಮೆ ಉದ್ವವವಾಗುತ್ತದೆ. ವಿರೋಧಾಭಿಪ್ರಾಯಗಳು ಕೆಲವೊಮ್ಮೆ ಬರಬಹುದು. ಆದರೆ ಒಳ್ಳೆಯ ಅಭಿಪ್ರಾಯಗಳನ್ನು ಸ್ವಾಗತ ಮಾಡತಕ್ಕ ಸಂದರ್ಭವನ್ನು ಕಾಣುತ್ತೇವೆ. ಸುಮಾರಾಗಿ ಕೆಲವು ಮಾನ್ಯ ಸದಸ್ಯರು ಕೆಲವೊಮ್ಮೆ ಇಲ್ಲಿ ಹೆಚ್ಚಿನ ವಿಚಾರಗಳನ್ನು ಹೇಳುವ ಸಂದರ್ಭ ಉಪಯೋಗ ಮಾಡಿದರೆ, ಇನ್ನು ಕೆಲವರಿಗೆ ಅಂತಹ ಸಂದರ್ಭವನ್ನು ಉಪಯೋಗ ಮಾಡುವುದಕ್ಕೆ ಸಾಧ್ಯ ಇಲ್ಲವೋ ಅಥವಾ ಅವರಿಗೆ ಅಂತಹ ಸಂದರ್ಭ ಬರುವುದೇ ಇಲ್ಲವೋ ಗೊತ್ತಿಲ್ಲ. ಆದರೆ ಮಾನ್ಯ ನಾರಾಯಣ ಸ್ವಾಮಿಯವರು ಎರಡನೇ ಗುಂಪಿಗೆ ಸೇರಿದವರು. ಅವರು ಪ್ರತಿಯೊಂದು ವಿಚಾರದಲ್ಲೂ ಕೂಡಾ ಹೇಳಲೇಬೇಕು, ಮಾಡಬೇಕು ಎನ್ನುವ ಪ್ರಶ್ನೆ ಅಲ್ಲ. ನಮ್ಮ ಬೀದರ್ ಕ್ಷೇತ್ರದ ಶಾಸಕರು ಹೇಳಿದಹಾಗೆ ಇವರು ಸೈಲೆಂಟ್ ವರ್ಕರ್ ಆಗಿದ್ದರು. ತಮ್ಮ ಕರ್ತವ್ಯವನ್ನು ಒಳ್ಳೆಯ ನಡತೆಯಿಂದ ಮಾಡಿತೋರಿಸುತ್ತಿದ್ದರು. ಮೊನ್ನೆ ಮಂಗಳವಾರ ಕೂಡಾ ನಮ್ಮ ಪಕ್ಷದ ಸಭೆಯಲ್ಲಿ ಇವರು ಕೋಲಾರ ಜಿಲ್ಲೆಯ ಕಿಡ್ಲಘಟ್ಟದಲ್ಲಿನ ಘಟನೆ ಬಗ್ಗೆ ಮಾತನಾಡುತ್ತಾ ಮಂತ್ರಿ ಆಲ್ಲಿ ಘಟನೆ ಮರುಕಳಿಸದಹಾಗೆ ನಾವು ಮಾಡಬೇಕು, ನಾವೆಲ್ಲರೂ ಪಕ್ಷಬೇಧವಿಲ್ಲದೆ ಒಟ್ಟಾಗಿ ಹೋಗಿ ಅವರನ್ನು ಸಂಜಿಕೆಗೆ ತೆಗೆದುಕೊಂಡು ಆಲ್ಲಿ ಏನು ಶಾಂತಿ ಮೂಡಿದೆ ಅದು ಮುಂದುವರಿಯುವಂತೆ ಮಾಡಬೇಕು ಎಂದು ಹೇಳಿದರು. ಅದು ಸಹಜವಾಗಿ ಸಮಾಜದಲ್ಲಿರತಕ್ಕ ಎಲ್ಲಾ ವರ್ಗದ ಜನರ ಬಗ್ಗೆ ಹೃದಯಾಂತರಾಳದಿಂದ ಬಂದಿರತಕ್ಕ ಮಾತು. ಶಾಸಕ ವೃಂದದಲ್ಲಿ ಕಳಕಳಿಯಿಂದ ಕರ್ತವ್ಯ ನಿರ್ವಹಿಸುವಂತಹ ವಿಶೇಷ ಗುಣವನ್ನು ಶ್ರೀ ನಾರಾಯಣ ಸ್ವಾಮಿಯವರು ಹೊಂದಿದ್ದನ್ನು ನಾನು ಕಂಡಿದ್ದೇನೆ. ಮಾನ್ಯ ಕೃಷ್ಣಾರೆಡ್ಡಿಯವರು ಹಾಗೂ ಮುತ್ತಿತರು ಹೇಳಿದಂತೆ ಅವರು ಮೈನ್ಯೂಟ್ ಕೋಮಿನಿಂದ ಬಂದವರು. ಇಂತಹ ಕೋಮಿನವರು ಈ ಜಾಗಕ್ಕೆ ಬರಲು ಸಾಧ್ಯವೇ ಇಲ್ಲದಂತಹ ಸಂದರ್ಭ ಒಂದು ಕಾಲದಲ್ಲಿತ್ತು.

ಆದರೆ ಶ್ರೀ ದೇವರಾಜ್ ಅರಸು ಅವರ ಕಾಲದಲ್ಲಿ ಹೆಚ್ಚಾಗಿ ಇಂತಿಂಥ ಕೋಮುಗಳನ್ನು ಹುಡುಕಿ ಹುಡುಕಿ ತೆಗೆದು ಸದಸ್ಯರನ್ನಾಗಿ ಮಾಡತಕ್ಕಂಥ ಒಂದು ಪ್ರಯತ್ನ ಆ ಸಂದರ್ಭದಲ್ಲಿ ನಡೆದಿದ್ದನ್ನು ನೋಡಿದ್ದೇವೆ. ಮತ್ತೆ ಅದು ಹೋಗತಕ್ಕಂಥ ಸಂದರ್ಭದಲ್ಲಿ ಕೂಡ ಕೆಲವರಾದರೂ ಕೂಡ ಇಂತಹ ಶಾಸಕರು ಅದೂ ಮೈನ್ಯೂಟ್ ಕಮ್ಯುನಿಟಿಗೆ ಸೇರಿರತಕ್ಕಂಥವರು ಮಿತ್ರರಾಗಿ, ಸದಸ್ಯರಾಗಿ ಜನ ಸಾಮಾನ್ಯರ ಪ್ರತಿನಿಧಿಗಳಾಗಿ ಇಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭವನ್ನು ಪಡೆದರು. ಅವನ್ನು ನೋಡತಕ್ಕಂಥ ಸಂದರ್ಭವನ್ನು ನಾವು ಪಡೆದೆವು. ಅವರ ಸಲಹೆ ಸಹಕಾರಗಳನ್ನು ವಿಚಾರಧಾರೆಗಳನ್ನು ನಾವು ಪಡೆದೆವು. ಶ್ರೀ ನಾರಾಯಣಸ್ವಾಮಿಯವರು ತಮ್ಮದೇ ಆದ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ಮಾಡಿದರು. ಶ್ರೀ ಬೊಮ್ಮಾಯಿಯವರು ತಾವು ಸಚಿವರಾಗಿ ಹೋದಾಗ ಅವರು ಯಾವರೀತಿ ಕರ್ತವ್ಯವನ್ನು ಮಾಡುತ್ತಿದ್ದರು ಎಂದು ಹೇಳಿದರು. ನಾನು ಕೂಡ ವಿರೋಧ ಪಕ್ಷದ ನಾಯಕನಾಗಿ ಹೋದಾಗ, ನನಗೆ ನೆನಪಿದ್ದಂತೆ ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ನಾನು ಹೋಗಿದ್ದೆ. ಬಹಳ ಕಳಕಳಿಯಿಂದ ಬಡವರನ್ನು ಸೇರಿಸಿ ಆಲ್ಲಿರತಕ್ಕಂಥ ಬರಗಾಲದ ವಿಚಾರದಲ್ಲಿ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಇವರು ಹೆಚ್ಚಿನ ಗಮನಕೊಟ್ಟು ಹೇಳಿದ್ದು ಇನ್ನೂ ಕೂಡ ನನಗೆ ಸ್ಪಷ್ಟವಾಗಿ ನೆನಪಿದೆ. ಬಡವರ ಬಗ್ಗೆ ಅತ್ಯಂತ ಕಳಕಳಿ ಇರತಕ್ಕಂಥ ಸಜ್ಜನರು ಕೆಲಕಾಲ ನಮ್ಮ ಜೊತೆಯಲ್ಲಿದ್ದು ಜನ ಸಾಮಾನ್ಯರ ಸೇವೆ ಮಾಡಬೇಕಾಗಿತ್ತು. ನಾವು ಎನ್ನುವುದು ನಮ್ಮ ಕೈಯಲ್ಲಿ ಇಲ್ಲದೇ ಇರತಕ್ಕಂಥ ವಿಚಾರ, ಆದಕ್ಕೆ ಅನಿರೀಕ್ಷಿತವಾಗಿ ಕೆಲವರನ್ನು ಕೆಲವೊಮ್ಮೆ ನಾವು ಕಳೆದುಕೊಳ್ಳುತ್ತೇವೆ ಅದು ದುಃಖಿಪನ್ನು ತಂದೊಡ್ಡತಕ್ಕಂಥಾದ್ದು. ಶ್ರೀ ಬಿ. ಎಲ್. ನಾಡರು ೧೯೬೭ ರಿಂದ ನಾನು ಇಲ್ಲಿ ಕಾಲಿಟ್ಟಾಗ ಅವರು ಸಚಿವರಾಗಿದ್ದರು. ಬಹುಶಃ ಅವರು ಡೆಪ್ಯುಟಿ ಮಿನಿಸ್ಟರ್ ಆಗಿದ್ದರು ಎಂದು ಕಾಣುತ್ತದೆ. ಅದಕ್ಕಿಂತಲೂ ಮೊದಲು ಕೂಡ ಒಂದರಲ್ಲಿ ಅವರು ಸದಸ್ಯರಾಗಿ ಇದ್ದರು ಎಂದು ನಾನು ಕೇಳಿದ್ದೇನೆ. ಸುಮಾರು ನಾಲ್ಕು ಸಾರಿ ಈ ಸದನದ ಸದಸ್ಯರಾಗಿ ಅವರು ಸೇವೆ ಸಲ್ಲಿಸಿರುವುದು ನಿಜಕ್ಕೂ ಅದು ದೊಡ್ಡ ಸೇವೆ. ಅವರು ಹಲವಾರು ವಿಚಾರಧಾರೆಗಳನ್ನು ಹೊಂದಿದ್ದರು. ಸಹಕಾರ

ಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದರು. ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಕೂಡ ಬಹಳ ಆಚ್ಚುಕಟ್ಟಾಗಿ ಕೆಲಸ ಮಾಡುತ್ತಿದ್ದರು. ಅಂತಹವರ ಅಗಲುವಿಕೆ ಕೂಡ ದುಃಖದ ಸಂದರ್ಭವಾಗಿದೆ. ಇವರೀರ್ವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಮತ್ತು ದೇವರು ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವುದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಲಿ ಎಂಬ ಮಾತನ್ನು ಹೇಳಿ ತಮಗೆ ಮಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ).—ಸನ್ಮಾನ್ಯ ಉಪಾಧ್ಯಕ್ಷರೇ, ಶ್ರೀಯುತ ಬಿ. ಎಲ್. ಗೌಡರಿಗೆ ಮತ್ತು ನನಗೆ ಸುಮಾರು ಮೂವತ್ತು ವರ್ಷಗಳಿಂದ ಸ್ನೇಹ. ಅವರು ಬಹಳ ಉತ್ತಮ ಸಹಕಾರಿಗಳು. ಆದರಲ್ಲೂ ೮೩ ರಲ್ಲಿ ನಾನು ಮತ್ತು ಅವರು ಒಟ್ಟಿಗೆ ಮಂತ್ರಿಗಳಾಗಿದ್ದಾಗ ಮೊದಲನೇ ಮಂತ್ರಿ ಮಂಡಲ ಸಭೆಯಲ್ಲಿ ರೈತರಿಗೆ ಯಾವ ವಿಧವಾದ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು ಎನ್ನುವ ವಿಷಯದಲ್ಲಿ ಮಾನ್ಯ ಬೊಮ್ಮಾಯಿಯವರ ನೇತೃತ್ವದಲ್ಲಿ ಸಬ್ ಕಮಿಟಿಯನ್ನು ಮಾಡಿದಾಗ ನಾನು ಮತ್ತು ಅವರು ಇಬ್ಬರೂ ಆ ಸಬ್ ಕಮಿಟಿಯಲ್ಲಿ ಕೆಲಸ ಮಾಡಿದ್ದೆವು. ಆಗ ಅವರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದರು. ಜೊತೆಗೆ ನಾವು ಪರಸ್ಪರ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದೆವು- ಹದಿನಾರು ಸಾರಿ ಅವರ ಸಲಹೆಗಳನ್ನು ಪಡೆಯುವ ಸೌಭಾಗ್ಯ ನನಗೆ ಸಿಕ್ಕಿತ್ತು. ಪ್ರಾಥಮಿಕ ಸಹಕಾರ ಸಂಘದಿಂದ ಹಿಡಿದು ರಾಜ್ಯಮಟ್ಟದ ಸಹಕಾರ ಸಂಘ ಮತ್ತು ರಾಷ್ಟ್ರಮಟ್ಟದ ಸಹಕಾರ ಸಂಘಗಳಲ್ಲೂ ಕೂಡ ಅವರು ಒಳ್ಳೆಯ ಪಾತ್ರವನ್ನು ನಿಭಾಯಿಸಿದ್ದಾರೆ. ಈ ದಿವಸ ಅವರ ಸಾವಿನಿಂದ ಈ ಒಂದು ಸಹಕಾರ ಕ್ಷೇತ್ರಕ್ಕೆ ಅಪಾರವಾದ ಹಾನಿಯಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಬಹಳ ಸರಳ ಸ್ವಭಾವದವರಾದ ಶ್ರೀ ಬಿ. ಎಲ್. ಗೌಡ ಅವರು ಬಡವರ ಬಗ್ಗೆ ಹೆಚ್ಚಿನ ಕಳಕಳಿಯನ್ನು ಇಟ್ಟುಕೊಂಡಿದ್ದವರು. ಅವರ ಮರಣದಿಂದ ಅವರ ಕುಟುಂಬಕ್ಕೆ ಅಷ್ಟೇ ಅಲ್ಲ ನಮ್ಮ ರಾಜ್ಯಕ್ಕೆ ಮತ್ತು ಅದರಲ್ಲೂ ಸಹಕಾರಿ ರಂಗಕ್ಕೆ ಅಪಾರವಾದ ಹಾನಿಯಾಗಿದೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಈ ಸಮಯದಲ್ಲಿ ಪ್ರಾರ್ಥಿಸುತ್ತಾ ಹಾಗೆಯೇ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕೂಡ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಸನ್ಮಾನ್ಯ ನಾರಾಯಣಸ್ವಾಮಿಯವರು ಬಹಳ ಸರಳ ಸ್ವಭಾವಿಗಳು. ಶುಕ್ರವಾರ ದಿವಸ ನನ್ನ ಪಕ್ಕದಲ್ಲಿ ಬಂದು ಕುಳಿತುಕೊಂಡು ಮಾತನಾಡಿದ್ದರು. ಆದರೆ ಇಷ್ಟು ಬೇಗ ಅವರಿಗೆ ಮರಣ ಬರುತ್ತದೆ ಎಂದು ಯಾರೂ ಭಾವಿಸಿರಲಿಲ್ಲ, ಈಗಲೂ ಅದನ್ನು ಊಹಿಸುವುದಕ್ಕೆ ನನಗೆ ಶಕ್ತಿ ಇಲ್ಲ.

ಇಂತಹ ಸರಳ ಸ್ವಭಾವಿ. ಜೊತೆಗೆ ನಮ್ಮ ಕೃಷ್ಣಾರೆಡ್ಡಿಯವರು ಹೇಳಿದಹಾಗೆ, ಬೆರಳೆಣಿಕೆಯಷ್ಟು ಜನ ಇದ್ದಂಥ ಕುಟುಂಬಕ್ಕೆ ಹಾಗೂ ಅಂತಹ ಒಂದು ವರ್ಗಕ್ಕೆ ಸೇರಿದವರು. ಅವರು ಶಾಸಕರಾಗಿ ಬಂದು ತಮ್ಮ ಕರ್ತವ್ಯವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಬಹಳ ಸರಳ ಸ್ವಭಾವಿ ಯಾವಾಗಲೂ ನಗುನಗುತ್ತಾ ಇರುತ್ತಿದ್ದರು. ಈ ದಿವಸ, ಈ ಸದನದಲ್ಲಿ ಅವರನ್ನು ಕಳೆದುಕೊಂಡಿದ್ದೇವೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ಆಗಿರತಕ್ಕ ನಷ್ಟವನ್ನು ಭರಿಸುವ ಶಕ್ತಿಯನ್ನು, ಅವರಿಗೆ ಕೊಡಲಿ ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಪಿಪ್ಪೇಸ್ವಾಮಿ (ಚಳ್ಳಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಜಿಲ್ಲೆಯ ಹಿರಿಯ ನಾಯಕರು ಹಾಗೂ ನಮ್ಮ ಮಾರ್ಗದರ್ಶಕರು ಆಗಿದ್ದಂಥ ಮಾನ್ಯ ಶ್ರೀ ಬಿ ಎಲ್. ಗೌಡರ ವಿಷಯವಾಗಿ ಈ ಸದನದಲ್ಲಿ ನನಗೆ ತೀರದಂಥ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಬಿ. ಎಲ್. ಗೌಡರ ರಾಜಕೀಯ ಜೀವನ ನನ್ನ ತಾಲ್ಲೂಕಿನಿಂದ ಬಂತು. ಪ್ರಥಮವಾಗಿ ಅವರು ರಾಜಕೀಯಕ್ಕೆ ಬಂದಿದ್ದು, ಪಿ. ಎಲ್. ಡಿ. ಬ್ಯಾಂಕ್ ಚುನಾವಣೆಗೆ ನಿಂತು, ಪಿ. ಎಲ್ ಡಿ. ಬ್ಯಾಂಕಿನ ಅಧ್ಯಕ್ಷರಾಗಿ, ನಿಜವಾಗಿಯೂ ನಮ್ಮ ತಾಲ್ಲೂಕಿನಲ್ಲಿ ಬಹಳ ಉತ್ತಮವಾಗಿ, ಆ ಬ್ಯಾಂಕಿನಿಂದ ಸೇವೆ ಮಾಡಿದರು. ಅವರ ಸೇವೆಯ ಪ್ರತಿಫಲವಾಗಿ ನಮ್ಮ ತಾಲ್ಲೂಕಿನ ಜನತೆ, ಮಾನ್ಯ ಬಿ.ಎಲ್. ಗೌಡರನ್ನು ಗುರುತಿಸಿ, ತಾವು ನಿಜವಾಗಿಯೂ ನಮ್ಮ ತಾಲ್ಲೂಕಿನ ಮುಖಂಡರಾಗಬೇಕು. ತಾಲ್ಲೂಕಿನ ಗಣ್ಯ ವ್ಯಕ್ತಿಗಳಾಗಿ ಆಗಬೇಕು ಎಂದು ತೀರ್ಮಾನಿಸಿ, ಅದರಂತೆ ಚಳ್ಳಕೆರೆ ಕ್ಷೇತ್ರದಿಂದ ವಿಧಾನಸಭೆಯ

ಸದಸ್ಯರಾಗಿ ಚುನಾವಣೆಗೆ ನಿಂತು ಆರಿಸಿ ಬಂದರು. ನಿಜವಾಗಿಯೂ ಅವರುಂದಕ್ಷತೆ, ನೈಪುಣ್ಯತೆ, ಎದೆಗಾರಿಕೆಯಿಂದ ನಮ್ಮ ಜಿಲ್ಲೆಯ ನಾಯಕರಾಗಿ ರಾಜಕೀಯ ಜೀವನ ನಡೆಸಿದರು ಈ ಸಂದರ್ಭದಲ್ಲಿ ಹೇಳಬೇಕಾದರೆ. ನಮ್ಮ ಜಿಲ್ಲೆಯ ಅಗ್ರಗಣ್ಯ ನಾಯಕರಾಗಿ ನಮ್ಮ ಜಿಲ್ಲೆಯ ರಾಜಕೀಯದಲ್ಲಿ ಪಾತ್ರ ವಹಿಸಿ, ಅವರ ಅತೀವ್ರಾದ ಬಲದಿಂದ ಈ ದಿನ ನಾನು ಶಾಸಕನಾಗಿ ಆರಿಸಿ ಬಂದಿದ್ದೇನೆ. ನಿಜವಾಗಿಯೂ ಅವರ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದ ನಾನು ಶಾಸಕನಾಗಿ ಇದ್ದೇನೆ. ಅಂತಹ ನಾಯಕರನ್ನು ಕಳೆದುಕೊಂಡು, ಈ ದಿನ ತಾಲ್ಲೂಕು. ಜಿಲ್ಲೆ ಹಾಗೂ ಇಡೀ ರಾಜ್ಯಕ್ಕೇ ಭರಿಸಲಾಗದ ನಷ್ಟವಾಗಿದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅವರ ಹತ್ತಿರ,

ಯಾರಾದರೂ ಬಂದು, ತನಗೆ ಅನ್ಯಾಯವಾಗಿದೆ ಎಂದು ಹೇಳಿದರೆ, ಅವರಿಗೆ ನಿಜವಾಗಿಯೂ ರಕ್ಷಣೆ ಕೊಡುತ್ತಿದ್ದರು, ಮತ್ತು ಅವರಿಗೆ ಧೈರ್ಯ ತುಂಬುತ್ತಿದ್ದರು. ಅಂತಹ ನಾಯಕರನ್ನು ಕಳೆದು ಕೊಂಡ ನಮ್ಮ ತಾಲ್ಲೂಕಿನ ಜನತೆ ನಿಜವಾಗಿಯೂ ದೌರ್ಭಾಗ್ಯರು ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅವರ ಮಾರ್ಗದರ್ಶನ, ನಮ್ಮ ಜಿಲ್ಲೆಯ ರಾಜಕೀಯಕ್ಕೇ ಭರಿಸಲಾರದ ನಷ್ಟ ಎಂದು ಹೇಳಿದರೆ ತಪ್ಪಾಗಲಾರದು. ಅಂತಹ ನಾಯಕರ ಸೇವೆ ಪಡೆದ ನಮ್ಮ ಜಿಲ್ಲೆಯ ಜನತೆ ನಿಜವಾಗಿಯೂ ಪುಣ್ಯಶಾಲಿಗಳೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅವರ ರಾಜಕೀಯ ಜೀವನ ಈ ಸದನದಲ್ಲಿರತಕ್ಕ ಹಿರಿಯ ಸದಸ್ಯರೆಲ್ಲರಿಗೂ ಗೊತ್ತಿರತಕ್ಕ ವಿಷಯ.

ಇನ್ನು ಡಾ॥ ನಾರಾಯಣಸ್ವಾಮಿಯವರು ತುಂಬಾ ಸೌಜನ್ಯಶೀಲರು. ಅವರು ಈ ಸದನದಲ್ಲಿ ತುಂಬಾ ಶೋಬೆಯಿಂದ ಇರುತ್ತಿದ್ದರು. ಅವರು ಯಾರಿಗೂ ಬೊರೆಯಾಗದಂಥ, ಮತ್ತು ಎಲ್ಲರಿಗೂ ಸಹಾಯವಾಗುವಂಥ ದೃಷ್ಟಿಕೋನವನ್ನು ಇಟ್ಟುಕೊಟ್ಟುಕೊಂಡು ತಮ್ಮ ಕಾರ್ಯದಕ್ಷತೆ ಮತ್ತು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಡಾ॥ ನಾರಾಯಣಸ್ವಾಮಿ ಮತ್ತು ಶ್ರೀಯುತ ಗೌಡರ ಆತ್ಮಕ್ಕೆ ದೇವರು ಶಾಂತಿಯನ್ನು ದಯಪಾಲಿಸಲಿ, ಮತ್ತು ಅವರ ಕುಟುಂಬಕ್ಕೆ ಶ್ರೀಯುತರ ನಿಧನದಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ಹೇಳಿ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ,

† ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ಶುಕ್ರವಾರ ವಿಧಾನ ಸಭೆಯಲ್ಲಿ ಇದ್ದಂಥ ಡಾ॥ ನಾರಾಯಣಸ್ವಾಮಿಯವರು ಇಂದು ಇಲ್ಲ. ಅವರು ನಮ್ಮಿಂದ ಕಣ್ಮರೆಯಾಗಿದ್ದಾರೆ. ಅವರು ನನ್ನ ಪಕ್ಷದ ಕ್ಷೇತ್ರವಾದ ಬಾಗೇಪಲ್ಲಿಯಿಂದ ಆರಿಸಿ ಬಂದವರು. ಕಳೆದ ಶುಕ್ರವಾರ ನನ್ನಪಕ್ಕದಲ್ಲಿಯೇ ಕುಳಿತು, ತಮ್ಮ ಕ್ಷೇತ್ರದ ಆಗುಹೋಗುಗಳು ಮತ್ತು ಅಭಿವೃದ್ಧಿ ಕಾರ್ಯಗಳ ಬಗ್ಗೆ ಚಿಂತನೆ ಮಾಡುತ್ತಿದ್ದರು. ಅವರು ಹೇಳುತ್ತಿದ್ದರು, ಏನು ಸಾರ್ ಮಾಡುವುದು, ನಮ್ಮ ಕ್ಷೇತ್ರದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ತೊಂದರೆಯಾಗುತ್ತದೆ ಎಂದು. ಅವರು ಯಾವಾಗಲೂ ಬಡ ಜನರ ಏಳಿಗೆಗಾಗಿ ಕೆಲಸ ಮಾಡುತ್ತೇನೆ ಎನ್ನುವ ಅಭಿಪ್ರಾಯವನ್ನು, ಮತ್ತು ಆ ಒಂದು ಚಿಂತನೆಯನ್ನು ವ್ಯಕ್ತಪಡಿಸುತ್ತಿದ್ದರು. ಅಂತ್ಯ ಈ ಶನಿವಾರ ಗೊತ್ತಾಯಿತು, ಶ್ರೀ ನಾರಾಯಣಸ್ವಾಮಿಯವರು ತೀರಿಕೊಂಡರು ಎಂದು. ಇದೊಂದು ದುರಾದೃಷ್ಟದ ಸಂಗತಿ, ನಾರಾಯಣಸ್ವಾಮಿಯವರು ತುಂಬಾ ಬಡತನದಿಂದ ಬಂದಂಥವರು, ಬಡವರಲ್ಲಿ ಕಾಳಜಿ ಇದ್ದಂಥವರು. ಅನೇಕ ಸಭೆಗಳಲ್ಲಿ, ಜಿಲ್ಲಾ ಮಟ್ಟದ ಸಭೆಗಳಲ್ಲಿ, ತಾಲ್ಲೂಕುಮಟ್ಟದ ಸಭೆಗಳಲ್ಲಿ, ಬಡವರ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಪಡಿಸುತ್ತಿದ್ದರು. ಮತ್ತು ಯಾರಿಗಾದರೂ ಅನ್ಯಾಯವಾಗಿದೆ ಎಂದರೆ ತಕ್ಷಣ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದರು. ಇವತ್ತು ನಾರಾಯಣಸ್ವಾಮಿಯವರು ನಮ್ಮ ಮುಂದೆ ಇಲ್ಲ. ಅದೇ ರೀತಿ ಮಾನ್ಯ ಬಿ.ಎಲ್. ಗೌಡರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದಂಥ ಒಂದು ಪಾತ್ರವನ್ನು ವಹಿಸಿ, ಸಹಕಾರಿ ರಂಗವನ್ನು ಮುಂದಕ್ಕೆ ತಂದರು. ಅವರು ಸಹ ಈಗ ಜೀವಿಗಳು, ಅವರೂ ಕೂಡಾ ಇವತ್ತು ನಮ್ಮನ್ನು ಅಗಲಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. ಒಂದು ಸಲ ಪ್ರೊಫೆಸರ್ ರಾಜರತ್ನಂರವರು ನಮ್ಮ ಊರಿಗೆ ಬಂದಿದ್ದರು. ಆಗ ಮಾನ್ಯ ತೀ. ತಾ. ಶರ್ಮರವರು ತೀರಿಕೊಂಡಿದ್ದರು. ಒಬ್ಬ ಪತ್ರಕರ್ತನಾಗಿ ನಾನು ಅವರಿಗೆ ತೀ.ತಾ. ಶರ್ಮರವರು ತೀರಿಕೊಂಡಿದ್ದನ್ನು ಹೇಳಿದೆ, ಆಗ ರಾಜರತ್ನಂರವರು "ಇಂದಪನ್, ನಾಳೆ ನಾನ್" ಎಂಬ ಮಾತನ್ನು ಹೇಳಿದರು. ಆದುದರಿಂದ ನಾವು ಯಾರೂ ಕೂಡಾ ಇಲ್ಲಿ ಶಾಶ್ವತವಾಗಿ ಇರುವುದಿಲ್ಲ. ಇದ್ದಷ್ಟು ಕಾಲ ನಾವು ಒಳ್ಳೆಯ ಕೆಲಸಗಳನ್ನು ಮಾಡಬೇಕು. ಅಂತ ಒಳ್ಳೆಯ ಕೆಲಸಗಳನ್ನು ಮಾನ್ಯ ಬಿ. ಎಲ್. ಗೌಡರವರು ಮಾಡಿದ್ದಾರೆ. ಮಾನ್ಯ ನಾರಾಯಣಸ್ವಾಮಿ

ಯವರೂ ಮಾಡಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಭಗವಂತನು ಅವರ ಕುಟುಂಬ ವರ್ಗದವರಿಗೆ, ಅವರ ಅಗಲುವಿಕೆಯಿಂದ ಆದಂಥ ನೋವನ್ನು ಸಹಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ, ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ನಾರಾಯಣಸ್ವಾಮಿಯವರು ನಮ್ಮನ್ನು ಅಗಲಿ ಹೋಗಿದ್ದಾರೆ ಎಂದರೆ ಅದು ನಂಬುವುದಕ್ಕೂ ಅವಕಾಶವಾದ ಮಾತಾಗಿದೆ. ಮೊನ್ನೆ ಮೊನ್ನೆ ನಮ್ಮ ಹತ್ತಿರ ಮಾತನಾಡಿದ್ದರು, ಒಮ್ಮಿಂದೊಮ್ಮೆಗೆ ಹೃದಯ ವಿಕಾರದಿಂದ ಬಳಲಿ ತೀರಿಕೊಂಡರು ಎಂದರೆ ಅದರಿಂದ ನಮ್ಮೆಲ್ಲರಿಗೂ ಆಘಾತವಾಗಿದೆ. ಅವರ ಅಗಲುವಿಕೆಯಿಂದ ಒಂದು ಕುಟುಂಬಕ್ಕೆ ನಷ್ಟವಾಗಿಲ್ಲ, ಇಡೀ ಹಿಂದುಳಿದ ವರ್ಗಗಳ ಸಮಾಜಕ್ಕೆ ಕೊಡಲಿ ಪೆಟ್ಟು ಬೆದ್ದಂತಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕಳೆದ ಚುನಾವಣೆಗಳಲ್ಲಿ ಅವರು ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು, ಇವತ್ತಿನ ದಿವಸ ಅವರು ಅಗಲಿ ಹೋಗಿದ್ದಾರೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ. ಅವರ ಕುಟುಂಬಕ್ಕೆ ದುಃಖವನ್ನು ಸಹಿಸಿಕೊಳ್ಳತಕ್ಕ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ,

ಎರಡನೆಯಂದಾಗಿ ನನ್ನ ಪರಮ ಮಿತ್ರರಾದ ಮತ್ತು ಬಹಳ ಕಾಲದಿಂದ ಸಹಕಾರಿಗಳಾಗಿದ್ದ ಮಾನ್ಯ ಬಿ.ಎಲ್. ಗೌಡರವರು ಅಗಲಿ ಹೋಗಿದ್ದಾರೆ. ಅವರ ಅಗಲುವಿಕೆ ಪ್ರತಿಯೊಬ್ಬ ಸಹಕಾರಿಯ ಮನಸ್ಸಿಗೂ ನೋವನ್ನು ಉಂಟು ಮಾಡುವ ಸಂಗತಿಯಾಗಿದೆ. ಗೌಡರು ತಮ್ಮ ಜೀವನದಲ್ಲಿ ಸಹ ಯಾವ ಜಾತಿ ಮಂತ ಪಂಥಗಳನ್ನು ನೋಡದೆ ಎಲ್ಲರಿಗೂ ಸಹಾಯ ಮಾಡುವಂತಹ ಸಮರ್ಥ ಧುರೀಣ ರಾಗಿದ್ದರು. ಅವರು ತ್ಯಾಗಮೂರ್ತಿಗಳೂ ನಿಜ. ಅನೇಕ ಸಂದರ್ಭಗಳಲ್ಲಿ ಎಲ್ಲೆಲ್ಲಿ ಕಷ್ಟ ಬರುತ್ತದೆ ಆಗ, ಅವರು ಯಾವುದೇ ಪಾರ್ಟಿಯಲ್ಲಿದ್ದರೂ ಕೂಡಾ, ಆ ಪಾರ್ಟಿಯವರು ಅವರನ್ನು ಅಲ್ಲಿಗೆ ನೇಮಿಸುವ ಸಂದರ್ಭ ಬರುತ್ತಿತ್ತು. ಆಗ ಅವರು ಮರುಮಾತನಾಡದೇ ತಲೆ ಒಡ್ಡಿನಿಲ್ಲುವ ಧುರೀಣ ರಾಗಿದ್ದರು. ಇವತ್ತು ಅವರಿಲ್ಲ. ಸಹಕಾರಿ ಧುರೀಣರಾದ ಅವರನ್ನು ಕಳೆದುಕೊಂಡು ಇವತ್ತು ಕರ್ನಾಟಕ ಸಹಕಾರ ಚಳುವಳಿ ಬಡವಾಗಿದೆ ಎಂದು ಹೇಳಿದರೆ ನಾನು ಸತ್ಯವನ್ನು ಹೇಳುತ್ತಿದ್ದೇನೆಯೇ ಹೊರತು ಅದು ವಿಪರ್ಯಾಸವಾಗುವುದಿಲ್ಲ. ಅವರ ಅಗಲುವಿಕೆಯಿಂದ ಈ ಸದನಕ್ಕೆ ಅಲ್ಲ. ಇಡೀ ಚಿತ್ರದುರ್ಗ ಜಿಲ್ಲೆಗೆ ಅಲ್ಲ, ಇಡೀ ಸಹಕಾರಿ ಪ್ರಪಂಚಕ್ಕೇ ಒಂದು ಆಘಾತವಾಗಿದೆ. ಶ್ರೀಮಾನ್ ವಿಕಾಂತಯ್ಯನವರಂ ಹಾಗೂ ಬೊಮ್ಮಾಯಿಯವರಿಗೆ ಒಂದು ಮಾತನ್ನು ನಾನು ಹೇಳಂವುದಕ್ಕೆ ಇಚ್ಛೆ ಪಡುತ್ತೇನೆ. ಅವರು ಅಗ್ರಿಕಲ್ಚರಲ್ ಮಿನಿಸ್ಟರ್ ಆಗಿದ್ದರು. ನಿಜಲಿಂಗಪ್ಪನವರ ಕಾಲದಲ್ಲೂ ಅವರು ಮಿನಿಸ್ಟರ್ ಆಗಿದ್ದರು. ಮೊನ್ನೆ ಮೊನ್ನೆ ತಾನೇ ಅವರು ಪಬ್ಲಿಕ್ ಸರ್ವೀಸ್ ಕಮಿಷನ್ ಸೇರಿದ್ದರು. ಇಲ್ಲಿ ಕಟ್ಟತಕ್ಕಂಥ ಸಹಕಾರ ಭವನಕ್ಕೆ ಆಗಲೀ ಅಥವಾ ರೈತರ ಭವನಕ್ಕೇ ಆಗಲೀ ಅದಕ್ಕೆ ಬಿ. ಎಲ್. ಗೌಡರ ಸ್ಮರಣಾರ್ಥ ಭವನ ಎಂದು ಹೆಸರಿಟ್ಟು ರೈತರಿಗೆ ಹಾಗೂ ಸಹಕಾರಿಗಳಿಗೆ ಸಮಾಧಾನವಾಗುವ ರೀತಿಯಲ್ಲಿ ಅವರ ಸ್ಮರಣೆಯನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿಯವರು).—ಮಾನ್ಯ ಅಧ್ಯಕ್ಷರೇ ಇದುವರೆಗೆ ಮಾತನಾಡಿದ ಎಲ್ಲ ಸದಸ್ಯರ ಧ್ವನಿಗೆ ನನ್ನಧ್ವನಿಯನ್ನು ಕೂಡಿಸಿ, ನಮ್ಮ ಪಾರ್ಟಿಯ ಸದಸ್ಯರಾಗಿದ್ದ ಇನ್ನೂ ಸಣ್ಣ ವಯಸ್ಸಿನ ಅಂದರೆ ೪೬ ವರ್ಷ ವಯಸ್ಸಿನವರಾಗಿದ್ದ ನಾರಾಯಣಸ್ವಾಮಿ ಯವರು ಇದ್ದಕ್ಕಿದ್ದಹಾಗೆ ಮರಣ ಹೊಂದಿದುದರ ಬಗ್ಗೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಅವರಿಂದ ಇನ್ನೂ ಅನೇಕ ತರಹ ಕೆಲಸಗಳು ಆಗಬೇಕಾಗಿತ್ತು. ಅನೇಕ ಜವಾಬ್ದಾರಿಗಳು ಅವರ ಮೇಲಿತ್ತು. ಅವರ ರಾಜಕೀಯ ಜೀವನದಲ್ಲಿ ಹಾಗೂ ಕುಟುಂಬ ಜೀವನದಲ್ಲಿ ಅವರು ಇನ್ನೂ ಮಾಡಬೇಕಾದಂಥ ಜವಾಬ್ದಾರಿಗಳು ಬೇಕಾದಷ್ಟು ಇದ್ದರೂ ಕೂಡಾ ದೇವರಂ ಯಾವಾಗ ಹೇಗೆ ಏತಕ್ಕೆ ಏತಕ್ಕೋಸ್ಕರ ಯಾವತರಹ ತೀರ್ಮಾನ ತೆಗೆದುಕೊಳ್ಳುತ್ತಾನೆ ಎನ್ನುವುದು ಗೊತ್ತಿಲ್ಲ. ಆದರೆಲ್ಲೂ ಈ ಮೃತ್ಯುವಿನ ಬಗ್ಗೆ ಹೇಳುವುದು ಕಷ್ಟ, ಅದೇ ರೀತಿ ದೇವರು ಇವರ ವಿಚಾರದಲ್ಲೂ ಒಂದು ನಿರ್ಣಯವನ್ನು ಮಾಡಿ ಬಿಟ್ಟರು ಅದೇ ನಮಗೆ ದುಃಖಕರವಾದ ನಿರ್ಣಯ.

ಇದರ ಜೊತೆಗೆ ಶ್ರೀಮಾನ್ ಬಿ. ಎಲ್. ಗೌಡರು ನನಗೆ ಸುಮಾರು ೨೦-೨೫ ವರ್ಷಗಳಿಂದ ಗೊತ್ತು. ಅವರು ಮೆಂಬರ್ ಆಗಿದ್ದಾಗ, ಡೆಪ್ಯುಟಿ ಮಿನಿಸ್ಟರ್ ಆಗಿದ್ದಾಗ ಮಿನಿಸ್ಟರ್ ಆಗಿದ್ದಾರೆ ಅವರು ಯಾವಾಗಲೂ ಅಕ್ಕ, ಅಮ್ಮ ಎಂದು ಬಾಯಿ ತುಂಬಾ ಮಾತನಾಡಿಸುತ್ತಿದ್ದರು. ಅವರು ನಾನು

ಹೇಳಿದ ಕೆಲಸವನ್ನು ಸ್ವಲ್ಪವೂ ಗರ್ವವಿಲ್ಲದೆ ನಿಗರ್ವಿಯಾಗಿ ಮಾಡುತ್ತಿದ್ದರು ಅಂತಹವರನ್ನು ನಾವಿಂದು ಕಳೆದುಕೊಂಡಿದ್ದೇವೆ. ಅವರು ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದವರು. ಅಂತಹವರನ್ನು ನಾವಿಂದು ಕಳೆದುಕೊಂಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ಆ ದೇವರು ಯಾರನ್ನು ಯಾವಾಗ ತೆಗೆದುಕೊಳ್ಳುತ್ತಾನೋ ಯಾರಿಗೂ ಗೊತ್ತಾಗುವುದಿಲ್ಲ. ಅವರನ್ನು ಕಳೆದುಕೊಂಡಿರುವ ಅವರ ಕುಟುಂಬದವರಿಗೆ ಈ ದುಃಖವನ್ನು ಭರಿಸಲು ಭಗವಂತ ಶಕ್ತಿ ಕೊಡಲೆಂದು ಹೇಳಿ ತಮ್ಮೆಲ್ಲರ ನುಡಿಯಲ್ಲಿ ನನ್ನ ನುಡಿ ಸೇರಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗಾಗಲೇ ನಮ್ಮನ್ನೆಲ್ಲ ಅಗಲಿ ಹೋದ ಶ್ರೀಮಾನ್ ನಾರಾಯಣಸ್ವಾಮಿಯವರ ವ್ಯಕ್ತಿತ್ವ ನನಗೆ ಚೆನ್ನಾಗಿ ಗೊತ್ತು. ಮೊನ್ನೆ ಶುಕ್ರವಾರ ಸಾಯಂಕಾಲ ನಾನು ಯಾರ ಜೊತೆಯಲ್ಲಿ ಮಾತನಾಡುತ್ತಿದ್ದೆ. ಆಗ ನಮ್ಮ ಪಕ್ಕದಲ್ಲಿ ಸಾದು ಹೋದವರು ಇದಿಲ್ಲ. ಅವರು ಅತ್ಯಂತ ಸರಳ ಜೀವಿ ಸೌಜನ್ಯಶೀಲರು, ಮತ್ತು ಸಹೃದಯಿಗಳು ಅವರ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿದರು. ಅವರು ಅತ್ಯಂತ ಕಡಿಮೆ ಜನಸಂಖ್ಯೆ ಇರುವಂತಹ ಕೋಮಿನಿಂದ ಚುನಾಯಿಸಿ ಬಂದವರು. ಅವರ ನೆನಪು ಮಾತ್ರ ಇಂದು ನಮಗಿದೆ. ಆ ದೇವರು ಅವರ ಕುಟುಂಬದವರಿಗೆ ದುಃಖವನ್ನು ಭರಿಸಲು ಶಕ್ತಿಯನ್ನು ಕೊಡಲೆಂದು ಹೇಳಿ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ. ಇನ್ನು ಶ್ರೀಮಾನ್ ಬಿ. ಎಲ್. ಗೌಡರನ್ನು ನಾನು ಹಲವಾರು ರೀತಿಯಲ್ಲಿ ಬಹಳ ಹತ್ತಿರದಿಂದ ಕಂಡಿದ್ದೇನೆ. ನಾನು ಶಾಸಕನಾಗಿ, ಸಹೋದ್ಯೋಗಿಯಾಗಿ ಮತ್ತು ಒಬ್ಬ ನಾಗರೀಕನಾಗಿ ಅವರನ್ನು ನಾನು ಬಲ್ಲೆ. ಅವರ ಜೀವನವನ್ನು ನಾನು ವರ್ಣನೆ ಮಾಡಲು ಆಗುವುದಿಲ್ಲ ಅಂತಹ ವ್ಯಕ್ತಿಯನ್ನು ನಾವಿಂದು ಕಳೆದುಕೊಂಡಿದ್ದೇವೆ. ಒಬ್ಬ ಸಹಕಾರಿ ನೇತಾರರನ್ನು ನಾವಿಂದು ಕಳೆದುಕೊಂಡಿದ್ದೇವೆ. ಅವರ ನಿಧನದಿಂದ ಸಹಕಾರಿ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಅಗಲಿಕೆಯಿಂದ ಅವರ ಕುಟುಂಬದವರಿಗೆ ಆ ದುಃಖವನ್ನು ಭರಿಸಲು ಭಗವಂತ ಸರ್ವ ಶಕ್ತಿಯನ್ನು ಕೊಡಲೆಂದು ನಾನು ಪ್ರಾರ್ಥಿಸಿ, ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲು ಎದ್ದು ನಿಲ್ಲಬೇಕೆಂದು ನಾನು ಸೂಚಿಸುತ್ತೇನೆ.

(ಎಲ್ಲ ಸದಸ್ಯರು ಒಂದು ನಿಮಿಷ ಮೌನವನ್ನು ಆಚರಿಸಿದರು)

ಉಪಾಧ್ಯಕ್ಷರು.—ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬಗಳಿಗೆ ಕಳುಹಿಸಲಾಗುವುದು. ಈಗ ಸದನವು ಮುಂಕ್ಯಾಯವಾಗಿ ನಾಳೆ ೧೧–೦೦ ಘಂಟೆಗೆ ಪುನಃ ಸೇರುವುದು.

(ಸಭೆ ೧೧–೫೪ ನಿಮಿಷಗಳಿಗೆ ಮುಂಕ್ಯಾಯವಾಗಿ ಮತ್ತೇ ಮಂಗಳವಾರ ಬೆಳಿಗ್ಗೆ ೧೧–೦೦ ಗಂಟೆಗೆ ಸೇರಲು ನಿಶ್ಚಯಿಸಿತು.)